# ಸಾವಯವ ಸಂಪದ

## ಸಾವಯವ ಕೃಷಿ, ಗ್ರಾಮೀಣ ಅಭಿವೃದ್ಧಿ ಪತ್ರಿಕೆ














ಪುಟ

***ತಿಂಗಳ ಮಾತು*** **:**ಕೃಷಿರಂಗದ ಬವಣೆ ನಿವಾರಣೆ ಕ್ರಮಗಳು ೨

***ತಿಂಗಳ ಬರಹ:***೧) ನೀರನ್ನು ಸೃಷ್ಟಿಸಲು ಸಾಧ್ಯವಿಲ್ಲ ೩

೨)ಕೋಲಾರದಲ್ಲಿ ನೀರಿಗಾಗಿ ಹಾಹಾಕಾರ ೪

***ಸಾವಯವ ಸಂಗತಿ:***ಮಿಶ್ರ ಬೆಳೆ ಬೇಸಾಯ ೫

**ಮುಡಬಳ್ಳಿ:** ಐತಿಹ್ಯ ಲೋಕದಲ್ಲೊಂದು ಇಣುಕು ನೋಟ. ೬

***ಪುಸ್ತಕ ಪರಿಚಯ: ಗೌರಿ ಜಿಂಕೆಯ ಆತ್ಮಕತೆ*** ೭

***ಕೃಷಿಕರ ಬದುಕು ಸಾಧನೆ:***ಇಪ್ಪತ್ತು ವರುಷ ತರಕಾರಿ ಕೃಷಿಯ ಹರುಷ ೮

***ಔಷಧೀಯ ಸಸ್ಯ :*** ಕೊತ್ತಂಬರಿ ೯

***ಹಿನ್ನೋಟ:***೧) ಹಲಸು ಹಬ್ಬ: ಹಲಸು ಭವಿಷ್ಯದ ಬೆಳೆ ಆಗಬೇಕಾದರೆ.... ೧೦ - ೧೧

೨)ಜನಮನ ಗೆದ್ದ ಸಿರಿಧಾನ್ಯ ಉತ್ಸವ ೧೧ - ೧೩

# ಕೃಷಿರಂಗದ ಬವಣೆ ನಿವಾರಣೆ ಕ್ರಮಗಳು

ಕೃಷಿರಂಗದ ಬಗ್ಗೆ ಈಗ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಭಾರೀ ಒಲವು ತೋರಿಸುತ್ತಿವೆ. ಇದಕ್ಕೆ ಕೆಲವು ಪ್ರಧಾನ ಕಾರಣಗಳಿವೆ. ಮೊದಲನೆಯದಾಗಿ, ಇಂದಿಗೂ ಶೇಕಡಾ ೫೦ ಜನರ ವಾಸ ಹಳ್ಳಿಗಳಲ್ಲೇ. ಕೃಷಿರಂಗ ಅಭಿವೃದ್ಧಿ ಹೊಂದಿದರೆ ಅದರಿಂದ ನೇರವಾಗಿ ಲಾಭವಾಗುವುದು ಹಳ್ಳಿಗರಿಗೆ.

ಎರಡನೆಯದಾಗಿ, ಬೆಂಬಿಡದ ಬರಗಾಲದಿಂದಾಗಿ ಗ್ರಾಮೀಣ ಜನರು ಕಂಗೆಟ್ಟು ಹೋಗಿದ್ದಾರೆ (ಭಾರೀ ಶ್ರೀಮಂತರಾದ ಕೃಷಿಕರನ್ನು ಹೊರತು ಪಡಿಸಿ). ಈ ಪರಿಸ್ಥಿತಿಯಲ್ಲಿ, ಗ್ರಾಮೀಣ ಪ್ರದೇಶದಲ್ಲಿ ಹೂಡಿಕೆ ಮಾಡಿದ ಪ್ರತಿಯೊಂದು ರೂಪಾಯಿಯಿಂದ ಅಲ್ಲಿನವರಿಗೆ ಹೆಚ್ಚಿನ ಅನುಕೂಲವಾಗುತ್ತದೆ.

ಮೂರನೆಯದಾಗಿ, ಕೃಷಿರಂಗ ಹಾಗೂ ಗ್ರಾಮೀಣ ಪ್ರದೇಶಗಳು ಸಮೃದ್ಧವಾದರೆ, ಅದರಿಂದಾಗಿ ನಗರಗಳಿಗೆ ವಲಸೆಯ ಒತ್ತಡ ಕಡಿಮೆಯಾಗುತ್ತದೆ. ಗ್ರಾಮಗಳೇ ಸಣ್ಣಪಟ್ಟಣಗಳಾಗಿ ಬೆಳೆದರೆ, ಗ್ರಾಮವಾಸಿಗಳು ನಗರಗಳಿಗೆ ವಲಸೆ ಹೋಗುವುದು ಕಡಿಮೆಯಾಗಲಿದೆ.

ಆದ್ದರಿಂದಲೇ, ಕೇಂದ್ರ ಸರಕಾರವು ೨೦೨೨ರ ಹೊತ್ತಿಗೆ ಗ್ರಾಮೀಣ ಜನರ ಆದಾಯವನ್ನು ಇಮ್ಮಡಿಗೊಳಿಸುವ ಮಂತ್ರ ಪಠಿಸುತ್ತಿದೆ. ಅದಕ್ಕಾಗಿ, ಕೃಷಿ ಉತ್ಪನ್ನಗಳ ಖರೀದಿ ಮತ್ತು ವಿತರಣೆಯ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಬದಲಾಯಿಸುವತ್ತ ಹೆಜ್ಜೆಯಿಟ್ಟಿದೆ.

೧೪ ಮಾರ್ಚ್ ೨೦೧೭ರಂದು, ಆರ್.ಸಿ. ಚೌಧರಿ, ಉಪಸಚಿವರು, ಗ್ರಾಹಕ ವ್ಯವಹಾರ, ಆಹಾರ ಮತ್ತು ಪಡಿತರ ವಿತರಣೆ ಅವರು ಲೋಕಸಭೆಯಲ್ಲಿ ಪ್ರಶ್ನೆಯೊಂದಕ್ಕೆ ನೀಡಿದ ಉತ್ತರ ಇದನ್ನು ಖಚಿತ ಪಡಿಸಿದೆ. ದೇಶದ ಉಗ್ರಾಣಗಳಲ್ಲಿ ತುಂಬಿರುವ ಸುರಕ್ಷಾ ಆಹಾರ ಧಾನ್ಯ ಸಂಗ್ರಹದ (ಬಫರ್ ಸ್ಟಾಕ್) ದಕ್ಷ ನಿರ್ವಹಣೆಗಾಗಿ ಖಾಸಗಿ ಏಜೆನ್ಸಿಯೊಂದನ್ನು ನೇಮಿಸಲಾಗುವುದು ಎಂದು ಅವರು ತಿಳಿಸಿದರು. ಆಹಾರಧಾನ್ಯಗಳ ಖರೀದಿ, ಸಂಗ್ರಹ, ಮೇಲುಸ್ತುವಾರಿ ಮತ್ತು ವಿಲೇವಾರಿ ಕೂಡ ಅದೇ ಏಜೆನ್ಸಿಯ ಜವಾಬ್ದಾರಿ ಆಗಿರುತ್ತದೆ ಎಂಬುದು ಅವರು ನೀಡಿದ ಮಾಹಿತಿ. ಖರೀದಿಯ ಏಲಂ ಪ್ರಕ್ರಿಯೆಯ ನಿರ್ವಹಣೆಗಾಗಿಯೂ ಏಜೆನ್ಸಿಯನ್ನು ಆಯ್ಕೆ ಮಾಡಲಾಗಿದೆಯೆಂದು ಹೇಳಿದರು.

ಭಾರತದ ಆಹಾರ ನಿಗಮದ ಉಗ್ರಾಣಗಳ ಶೇಖರಣಾ ಸಾಮರ್ಥ್ಯ ಸಾಕಷ್ಟಿಲ್ಲ. ಹಾಗಾಗಿ, ಕೇಂದ್ರ ಸರಕಾರದ ೩೦,೦೦೦ ದಶಲಕ್ಷ ಟನ್ ಆಹಾರ ಸಂಗ್ರಹದ ಶೇಕಡಾ ೩೦ರಷ್ಟು ಹಾಳಾಗಿ ಹೋಗುತ್ತಿದೆ ಎಂಬುದು ಎಲ್ಲರಿಗೂ ಗೊತ್ತಿರುವ ಸತ್ಯ. ಈ ಬೇಜವಾಬ್ದಾರಿಯಿಂದಾಗಿ ಆಕ್ರೋಶಗೊಂಡ ಸುಪ್ರೀಂ ಕೋರ್ಟ್, ಕೇಂದ್ರ ಸರಕಾರಕ್ಕೆ ಖಡಕ್ ಆದೇಶ ನೀಡಿತು. ಇದರ ಪರಿಣಾಮವಾಗಿ, ೨೦೦೭ರ ಉಗ್ರಾಣ ಅಭಿವೃದ್ಧಿ ಮತ್ತು ನಿಯಂತ್ರಣ ಕಾಯಿದೆಯನ್ನು ೨೫ ಅಕ್ಟೋಬರ್ ೨೦೧೦ರಂದು ಕೇಂದ್ರ ಸರಕಾರ ಜ್ಯಾರಿ ಮಾಡಿತು.

ಇದರಿಂದಾಗಿ ರೈತರಿಗೆ ಹಲವು ಅನುಕೂಲಗಳಿವೆ. ರೈತರು ತಮ್ಮ ಫಸಲನ್ನು ಹತ್ತಿರದ ಅಧಿಕೃತ ಉಗ್ರಾಣಕ್ಕೆ ಒಯ್ಯಬೇಕು. ಆ ಉಗ್ರಾಣದ ಅಧಿಕಾರಿಗಳು ರೈತರು ತಂದ ಧಾನ್ಯವನ್ನು (ಗೋಧಿ, ಭತ್ತ, ಉದ್ದು, ಹೆಸರು ಇತ್ಯಾದಿ) ಗ್ರೇಡಿಂಗ್ ಮಾಡುತ್ತಾರೆ. ಆ ಧಾನ್ಯದ ಹೆಸರು, ತೂಕ ಮತ್ತು ಗ್ರೇಡ್ ನಮೂದಿಸಿ ಒಂದು ರಶೀದಿ ಕೊಡುತ್ತಾರೆ. ಈ ರಶೀದಿಯು ಒಂದು ಚೆಕ್ ಇದ್ದಂತೆ. ರೈತರು ಇದನ್ನು ಬ್ಯಾಂಕಿಗೆ ಅಥವಾ ಧಾನ್ಯ ವ್ಯಾಪಾರಿಗೆ ಕೊಟ್ಟು, ಅದರ ಬದಲಾಗಿ ಹಣ ಪಡೆಯಬಹುದು. ಈ ರಶೀದಿ "ಖರೀದಿಸಿದ" ಧಾನ್ಯ ವ್ಯಾಪಾರಿ, ಹತ್ತಿರದ ಉಗ್ರಾಣಕ್ಕೆ ಅದನ್ನು ಸಲ್ಲಿಸಿ, ಅದರಲ್ಲಿ ನಮೂದಿಸಿದ ತೂಕ ಮತ್ತು ಗ್ರೇಡಿನ ಧಾನ್ಯ ಪಡೆಯಬಹುದು.

ಅದೇನಿದ್ದರೂ, ಈ ವ್ಯವಸ್ಥೆಯಲ್ಲಿ ಲೋಪದೋಷಗಳಿವೆ. ಉಗ್ರಾಣಗಳನ್ನು ಯಾರು (ರಾಜ್ಯ ಸರಕಾರ ಅಥವಾ ಏಜೆನ್ಸಿ) ಸರ್ಟಿಫೈ ಮಾಡಬೇಕೆಂದು ನಿಯಮಗಳಲ್ಲಿ ತಿಳಿಸಿಲ್ಲ. ಸಾಕಷ್ಟು ಉಗ್ರಾಣಗಳೇ ಇಲ್ಲ; ಅಂದಮೇಲೆ, ಎಲ್ಲ ರೈತರೂ ತಮ್ಮ ಫಸಲನ್ನು ಅಧಿಕೃತ ಉಗ್ರಾಣಗಳಲ್ಲಿ ಶೇಖರಣೆ ಮಾಡುವಂತಿಲ್ಲ. ಅದಲ್ಲದೆ, ಈ ರಶೀದಿಗಳ ಡಿಜಿಟಲೀಕರಣ ಆಗಿಲ್ಲ. ಹಾಗಾಗಿ, ನಕಲಿ ರಶೀದಿಗಳಿಂದ ಮೋಸವಾಗುವ ಸಾಧ್ಯತೆಗಳಿವೆ. ಹಾಗೂ, ಉಗ್ರಾಣಗಳಲ್ಲಿ ಧಾನ್ಯ ಶೇಖರಣೆ, ಗುಣಮಟ್ಟ ರಕ್ಷಣೆ ಮತ್ತು ಧಾನ್ಯ ವಿಲೇವಾರಿಯಲ್ಲಿ ಬಹಳಷ್ಟು ಸುಧಾರಣೆಗಳು ಆಗಬೇಕಾಗಿವೆ.

ಕೆಲವು ಆಶಾದಾಯಕ ಬೆಳವಣಿಗೆಗಳೂ ಆಗಿವೆ. ಅಧಿಕೃತ ಏಜೆನ್ಸಿಯು ೧,೩೦೦ ಉಗ್ರಾಣಗಳನ್ನು ನೋಂದಾಯಿಸಿದೆ. ಇವುಗಳ ಒಟ್ಟು ಶೇಖರಣಾ ಸಾಮರ್ಥ್ಯ ೫೭.೮೦ ಲಕ್ಷ ಟನ್. ದ್ವಿದಳ ಧಾನ್ಯಗಳ ಸಂಶೋಧನೆಯಲ್ಲಿ ಭಾಬಾ ಅಣುವಿಜ್ನಾನ ಸಂಶೋಧನಾ ಕೇಂದ್ರ (ಬಿ ಎ ಆರ್ ಸಿ )ದ ವಿಜ್ನಾನಿಗಳೂ ಭಾಗವಹಿಸುತ್ತಿದ್ದಾರೆ. ಈ ವರೆಗೆ ೧೯ ಅಧಿಕ ಇಳುವರಿ ನೀಡುವ ದ್ವಿದಳ ಧಾನ್ಯಗಳ ತಳಿಗಳನ್ನು ಅಭಿವೃದ್ಧಿ ಪಡಿಸಿದ್ದಾರೆ. ಜನವರಿ ೨೦೧೬ರಲ್ಲಿ ಜ್ಯಾರಿಯಾದ ಪ್ರಧಾನಮಂತ್ರಿ ಬೆಳೆ ವಿಮಾ ಯೋಜನೆಯಿಂದಾಗಿ ಲಕ್ಷಗಟ್ಟಲೆ ರೈತರ ಫಸಲು ವಿಮಾ ರಕ್ಷಣೆಗೆ ಒಳಪಟ್ಟಿದೆ.

ಈ ಬೆಳವಣಿಗೆಗಳ ಬಗ್ಗೆ ಹಿರಿಯ ವಿಜ್ನಾನಿ ಅಶೋಕ್ ಗುಲಾಟಿ ಹೀಗೆನ್ನುತ್ತಾರೆ, "೨೦೧೬ರಿಂದೀಚೆಗೆ ಬೆಳೆ ವಿಮೆಯ ಕಂತು ಮುಂಗಾರು ಬೆಳೆಗೆ ಶೇಕಡಾ ಎರಡು ಮತ್ತು ಹಿಂಗಾರು ಬೆಳೆಗೆ ಶೇಕಡಾ ೧.೫ ಎಂದು ನಿಗದಿ ಪಡಿಸಲಾಗಿದೆ. ಇದರಿಂದಾಗಿ, ಮುಂಗಾರಿನಲ್ಲಿ ಬೆಳೆವಿಮೆಗೆ ಒಳಪಟ್ಟ ಪ್ರದೇಶದಲ್ಲಿ ಭಾರೀ ಹೆಚ್ಚಳವಾಗಿದೆ. ೨೦೧೫ರಲ್ಲಿ ೨೭.೫ ದಶಲಕ್ಷ ಹೆಕ್ಟೇರ್ ಇದ್ದದ್ದು ೨೦೧೬ರಲ್ಲಿ ೩೭.೫ ದಶಲಕ್ಷ ಹೆಕ್ಟೇರಿಗೆ ವಿಸ್ತರಿಸಿದೆ. ಈ ಅವಧಿಯಲ್ಲಿ, ಬೆಳೆ ವಿಮೆಯ ಮೊತ್ತವೂ ೬೦,೭೭೩ ಕೋಟಿ ರೂಪಾಯಿಗಳಿಂದ ೧,೦೮,೦೫೫ ಕೋಟಿ ರೂಪಾಯಿಗಳಿಗೆ ಏರಿಕೆಯಾಗಿದೆ. ಆದರೆ, ಬೆಳೆ ನಷ್ಟ ಅಂದಾಜಿಸುವ ವಿಧಾನದಲ್ಲಿ ಬದಲಾವಣೆ ಆಗಿಲ್ಲ; ಇದಕ್ಕೆ ಅಗತ್ಯವಾಗಿದ್ದ ಸ್ಮಾರ್ಟ್ ಫೋನುಗಳನ್ನು ಹಲವು ರಾಜ್ಯ ಸರಕಾರಗಳು ಖರೀದಿಸಿಯೇ ಇಲ್ಲ."

ದ್ವಿದಳ ಧಾನ್ಯಗಳನ್ನು ಬೆಳೆಯುವ ರೈತರ ಬವಣೆ ಹೆಚ್ಚಾಗಲು ಇವೆಲ್ಲ ಯೋಜನೆಗಳ ಲೋಪದೋಷಗಳೇ ಕಾರಣ. ನಮ್ಮ ದೇಶದಲ್ಲಿ ದ್ವಿದಳ ಧಾನ್ಯಗಳ ಉತ್ಪಾದನೆ ಹೆಚ್ಚುತ್ತಿದ್ದರೂ ಕಳೆದ ಎರಡು ವರುಷಗಳಲ್ಲಿ ಕೇಂದ್ರ ಸರಕಾರ ಲಕ್ಷಗಟ್ಟಲೆ ಟನ್ ದ್ವಿದಳ ಧಾನ್ಯ ಆಮದು ಮಾಡಿಕೊಂಡದ್ದು ಎಲ್ಲದಕ್ಕಿಂತ ಮುಖ್ಯ ಕಾರಣ. ಇನ್ನಾದರೂ ಸರಕಾರ ಈ ಎಲ್ಲ ಲೋಪದೋಷಗಳನ್ನು ಸರಿಪಡಿಸಿ, ದ್ವಿದಳ ಧಾನ್ಯ ಬೆಳೆಗಾರರ ಹಿತ ಕಾಯುತ್ತದೆಂದು ಆಶಿಸೋಣ.

—ಸಂಪಾದಕ

# ನೀರನ್ನು ಸೃಷ್ಟಿಸಲು ಸಾಧ್ಯವಿಲ್ಲ



ರಾಜಧಾನಿಗೆ ಪ್ರಯಾಣಿಸುತ್ತಿದ್ದಾಗ ಗೌರಿಬಿದನೂರಿನ ರೈತರೊಬ್ಬರ ಪರಿಚಯವಾಯಿತು. ನೀರಿನ ಸಂಕಟಗಳದ್ದೇ ಮಾತುಕತೆ. ರಾಜಕಾರಣದ ಆಟಗಳ ಆಟೋಪ. ಕರ್ನಾಟಕವನ್ನು ಉತ್ತರ, ದಕ್ಷಿಣ ಎಂದು ವಿಭಾಗಿಸುವ, ಭಾವನೆಗಳಿಗೆ ಘಾಸಿ ಮಾಡುವ, ಸಂಘರ್ಷಗಳನ್ನು ಒಂದು ವ್ಯವಸ್ಥೆಯೊಳಗೆ ಜೀವಂತವಾಗಿಡುವ ಕಾಣದ ಕೈಗಳ ಕರಾಮತ್ತುಗಳನ್ನು ಎಳೆಎಳೆಯಾಗಿ ಬಿಚ್ಚಿಟ್ಟರು. ಅವರಲ್ಲಿ ನೀರಿಗಾಗಿ ಮನಸ್ಸುಗಳನ್ನು ಒಡೆಯುವ ರಾಜಕೀಯ ವ್ಯವಸ್ಥೆಗಳತ್ತ ಆಕ್ರೋಶವಿತ್ತು.

"ಅತ್ತ ಕಳಸಾ ಬಂಡೂರಿ, ಇತ್ತ ನೇತ್ರಾವತಿ, ಮೊತ್ತೊಂದೆಡೆ ಕಾವೇರಿ, ಇನ್ನೊಂದೆಡೆ ಮಹದಾಯಿ.. ಹೀಗೆ ಸಮಸ್ಯೆಗಳನ್ನು ವಿವಾದದ ಸುಳಿಯಲ್ಲಿ ಸಿಲುಕಿಸುವುದೇ ರಾಜಕೀಯ ಶಕ್ತಿಗಳ ಗುರಿ ಎನ್ನುವಂತಾಗಿದೆ. ಇವರಿಗೆಲ್ಲಾ ಪರಿಹಾರಕ್ಕೆ ದಾರಿಗಳು ಗೊತ್ತಿವೆ. ಓಟು ಬ್ಯಾಂಕುಗಳು ಈ ದಾರಿಗಳನ್ನು ವಿಮುಖಗೊಳಿಸುತ್ತಿವೆ. ಸಾರ್ವಜನಿಕ ಆಸ್ತಿಗಳು, ಜನರ ಸಂಕಷ್ಟಗಳು ಅವರಿಗೆ ಬೇಕಾಗಿಲ್ಲ. ಜನರನ್ನು ಕೆರಳಿಸುವ ಹೇಳಿಕೆಗಳಿಂದ ಆಗುವ ವಿಘ್ನಗಳಿಂದ ಖುಷಿ ಪಡುವ ಜನನಾಯಕರು ಇರುವಲ್ಲಿಯ ತನಕ ಸಮಸ್ಯೆಗಳು ಶಾಶ್ವತವಾಗಿರುತ್ತವೆ." ಎಂದರು.



"ಕೆರೆಗಳಿಂದಾಗಿ ಜೀವಜಲವು ಉಸಿರಾಡುತ್ತಿವೆ. ಕರ್ನಾಟಕದಲ್ಲಿ ಎಷ್ಟೊಂದು ಕೆರೆಗಳಿದ್ದುವು. ಇದಕ್ಕಾಗಿ ಭೂಮಿಯನ್ನು ಉಂಬಳಿ ಬಿಡುವ ಸನ್ಮಸ್ಸಿನವರಿದ್ದರು. ಧಾರ್ಮಿಕ, ಸಾಮಾಜಿಕ ಭಾವನೆಗಳು ಆ ಊರಿನ ನೀರಿನ ಆವಶ್ಯಕತೆಗಳನ್ನು ನೀಗಿಸುತ್ತಿದ್ದುವು. ಹಿಂದಿನ ಕಾಲದಿಂದಲೂ ನೀರಿಗೆ ಮೊದಲಾದ್ಯತೆ. ಆ ಬಳಿಕವೇ ಕೃಷಿ, ಅಭಿವೃದ್ಧಿಯತ್ತ ಯೋಚನೆ. ಇಂತಹ ಸಂಸ್ಕøತಿಯಿರುವ ಕರ್ನಾಟಕವನ್ನು ರಾಜಕೀಯ ವಾತಾವರಣ ಹಾಳುಮಾಡಿತು. ಮೊದಲಾದ್ಯತೆಯಲ್ಲಿರಬೇಕಾದ ನೀರಿನ ಲಭ್ಯತೆಯು ಕೊನೆಯ ಆಯ್ಕೆಯಾಗಿ ಬದಲಾಯಿತು." ಅವರು ಮಾತನಾಡುತ್ತಿದ್ದಾಗ ಇಡೀ ಕನ್ನಾಡಿನ ನೀರಿನ ಕಣ್ಣೀರಿಗೆ ದನಿಯಾದಂತೆ ಕಂಡಿತು.

"ಸರಕಾರಕ್ಕೆ ಗ್ರಾಮ ಭಾರತದ ಹಿತ ಬೇಕಾಗಿಲ್ಲ. ಕೋಟಿಗಳ ಮುಂದೆ ಎಷ್ಟು ಸೊನ್ನೆಯನ್ನಿಡಬೇಕೆಂಬ ಲೆಕ್ಕಚಾರ. ಎಷ್ಟು ಸೊನ್ನೆಗಳನ್ನಿಡಬೇಕೆಂದು ನಿರ್ಧರಿಸುವ ಅಧಿಕಾರಿಗಳಿದ್ದಾರೆ. ಆರ್ಥಿಕ ಸಂಕಷ್ಟದಿಂದ ಆತ್ಮಹತ್ಯೆಗಳಾದಾಗ ಅಷ್ಟಿಷ್ಟು ನೀಡಿ ಕೈತೊಳೆದುಕೊಂಡರು. ಕೇಂದ್ರದಿಂದಲೂ ಅಧ್ಯಯನ ತಂಡ ಬಂತು. ಅವೆಲ್ಲಾ ಕಾಗದದಲ್ಲಿ ಉಳಿದು ಬಿಡುತ್ತವಷ್ಟೆ. ನಮ್ಮ ಬದುಕಿಗೆ ಬೇಕಾದ ವ್ಯವಸ್ಥೆಯನ್ನು ನಾವೇ ಪೂರೈಸಿಕೊಳ್ಳಬೇಕು. ನೀರಿನ ವಿಚಾರಕ್ಕೆ ಬಂದರೆ ಅಳಿದುಳಿದ ಕೆರೆಗಳಲ್ಲಿ ನೀರು ಬತ್ತಿವೆ. ಅಂತರ್ಜಲ ಆಳಕ್ಕಿಳಿದಿದೆ. ಕೊಳವೆಬಾವಿಗಳನ್ನು ಕೊರೆಯಲು ಪೈಪೋಟಿ. ನದಿಗಳಲ್ಲಿ ನೀರಿಲ್ಲ. ಇಷ್ಟೆಲ್ಲ ತೊಂದರೆಗಳಿಗೆ ಯಾರು ಕಾರಣ?"

ರೈತರ ಕುರಿತು ಹಗುರವಾಗಿ ಮಾತನಾಡುವ ನಮ್ಮ ನಡುವಿನ ಸಾಕ್ಷರರ ಚಿತ್ರ ಹಾದುಹೋದುವು. ಯಾವುದೇ ಪದವಿಯನ್ನು ಓದದ ಅವರು ಕೃಷಿ, ನೀರಿನ ಜ್ಞಾನದಲ್ಲಿ ಅಪ್ಡೇಟ್ ಆಗಿದ್ದರು. ರಾಜಧಾನಿಯಲ್ಲಿ ಬಸ್ಸಿಳಿದು (ಮೆಜೆಸ್ಟಿಕ್) ಒಂದರ್ಧ ಗಂಟೆ ಮಾತನಾಡುವಾಗ ಹೇಳಿದ ಒಂದೆರಡು ವಾಕ್ಯ ಮರೆಯಲಾರೆ - "ರೈತನ ಬೆನ್ನು ತಟ್ಟುವವರು ಯಾರೂ ಇಲ್ಲ. ಅನ್ನದಾತ ಎಂದು ಅಟ್ಟಕ್ಕೇರಿಸುವ ಕೆಟ್ಟ ಚಾಳಿ. ನಿಜಕ್ಕೂ ರೈತ ಸಮೂಹಕ್ಕೆ ಅವಮಾನ ಮಾಡಿದಂತೆ. ನೋಡಿ, ನಾವು ನಿಂತ ಜಾಗ ಇದೆಯಲ್ಲಾ, ಮೊದಲು ಇದೊಂದು ದೊಡ್ಡ ಕೆರೆಯಾಗಿತ್ತು. ಈಗ ಹೇಗಿದೆ? ಇದೊಂದು ಉದಾಹರಣೆ ಮಾತ್ರ. ರಾಜ್ಯದ ಎಲ್ಲಾ ಕೆರೆಗಳ ಸ್ಥಿತಿಯೂ ಇದೇ. ಕೆರೆಗಳ ಪುನರ್ಜ್ಜೀವನ ಮತ್ತು ನೀರಿಂಗಿಸುವ ಕೆಲಸ ನಡೆಯಬೇಕಾಗಿದೆ. ಜತೆಗೆ ಅರಣ್ಯೀಕರಣವೂ ಕೂಡಾ."

ಕೆರೆಗಳು ನೀರೊದಗಿಸುವ ಜಲನಿಧಿಗಳು. ಒಂದು ಕೆರೆ ತುಂಬಿದಾಗ ಸುತ್ತಲಿನ ಬಾವಿ, ಚಿಕ್ಕ ಕೆರೆಗಳು, ಅಂತರ್ಜಲ, ಒರತೆ ತುಂಬಿ ನೀರಿನ ಸಮೃದ್ಧತೆ. ಆ ನೀರಿನ ಸುತ್ತ ಸಾಂಸ್ಕøತಿಕವಾದ ಭಾವನೆಗಳು. ದೈವಿಕ ದೃಷ್ಟಿಕೋನ. ಒಂದಷ್ಟು ಆಚಾರಗಳು, ವಿಚಾರಗಳು. ಇಂತಹ ಕಟ್ಟುಪಾಡುಗಳನ್ನು ಹಿರಿಯರು ನೀರುಳಿಸುವ ಲಕ್ಷ್ಯದಲ್ಲಿಟ್ಟೇ ರೂಪಿಸಿದ್ದರು. ಬದಲಾದ ಕಾಲಘಟ್ಟದಲ್ಲಿ ಅಂತಹ ವ್ಯವಸ್ಥೆಯನ್ನು ಪ್ರಶ್ನಿಸಿದೆವು. ವಿಮರ್ಶಿಸಿದೆವು. ಮೂಢನಂಬಿಕೆ ಎಂದೆವು. ಶೋಷಣೆ ಎನ್ನುವ ಹಣೆಪಟ್ಟಿ ಹಾಕಿದೆವು. ಪರಿಣಾಮ ಕಣ್ಣ ಮುಂದಿದೆ.

ನಮ್ಮ ಹಿರಿಯರನ್ನು ಮಾತನಾಡಿಸೋಣ. ಅವರಿಗೆ ಭೂಮಿಯು ತಾಯಿ ಸದೃಶ. ನದಿಗಳೆಲ್ಲಾ ಅಕ್ಕ ತಂಗಿಯರು. ಅವರನ್ನು ಆರಾಧಿಸಿದರು. ತಂತಮ್ಮ ಮಿತಿಯ ಜ್ಞಾನದಿಂದ ನೀರಿನ ಹರಿವನ್ನು ತಡೆದು ಭೂಮಿಗೆ ಇಂಗಿಸುವ ಯತ್ನ ಮಾಡಿದರು. ಕೆರೆ, ಮದಕ, ಪಳ್ಳ, ಹಳ್ಳ, ಬಾವಿಗಳಲ್ಲಿರುವ ನೀರಿನ ಲಭ್ಯತೆಯಂತೆ ಕೃಷಿ ಮಾಡಿದರು. ಅರಣ್ಯವನ್ನು ಬೆಳೆಸಿದರು. ಮಳೆಗಾಲದಲ್ಲಿ ಒಸರಾಗಿ ಹರಿಯುವ ನೀರನ್ನು ಬಳಸಿಕೊಂಡರು. ಎಲ್ಲೆಲ್ಲಾ ಸಂಗ್ರಹಿಸಿಕೊಳ್ಳಲು ಸಾಧ್ಯವಿದೆಯೋ ಅಲ್ಲೆಲ್ಲಾ ನೀರನ್ನು ಸಂಗ್ರಹಿಸಿ ಬಳಸಿದರು, ಭೂ ಒಡಲಿಗೆ ಉಣಿಸಿದರು.

ಕೃಷಿಕ ಡಾ.ಡಿ.ಸಿ.ಚೌಟರು 'ಮದಕ' ಎನ್ನುವ ಪುಸ್ತಕದಲ್ಲಿ ಮಾರ್ಮಿಕವಾಗಿ ಹೇಳುತ್ತಾರೆ, "ನಮ್ಮ ಜಲಮೂಲಗಳು ಬತ್ತುತ್ತಿವೆ. ಕಾಡು ಕಡಿದು ಮೂಲನಿವಾಸಿಗಳನ್ನು ಓಡಿಸಿ ಸಹಸ್ರಾರು ಕೋಟಿ ರೂಪಾಯಿಯ ಸಂಪತ್ತನ್ನು ವ್ಯಯಿಸಿ ಅಣೆಕಟ್ಟೆಗಳನ್ನು ಕಟ್ಟಿ ನೀರು ಹಂಚುವ ಕಾರ್ಯಕ್ಕೆ ತೊಡಗಿದ್ದೇವೆ. ಭೂಮಿಯ ಗರ್ಭದಿಂದ ಸಾವಿರ ಅಡಿಯ ಕೊಳವೆಬಾವಿಗಳನ್ನು ಹಾಕಿ ನೀರು ಹೀರಹತ್ತಿದೆವು. ಈಗ ಸಮುದ್ರದ ನೀರಿನ ಉಪ್ಪನ್ನು ಶುದ್ಧಗೊಳಿಸಿಸುವ ಸಾಹಸಕ್ಕೆ ಹೊರಟಿದ್ದೇವೆ. ಈ ಎಲ್ಲಾ ಸಾಹಸಗಳು ಪಟ್ಟಣದ ಅವಶ್ಯಕತೆಗಳನ್ನು ಪೂರೈಸಲು. ಕೃಷಿಗಾಗಿ ಅಲ್ಲ. ಇವು ಸೃಷ್ಟಿಯ ನಿಯಮಗಳನ್ನು ಬದಲಿಸಿ ನಿಸರ್ಗದ ಮೇಲೆ ತನ್ನ ಅಧಿಕಾರವನ್ನು ಸ್ಥಾಪಿಸುವ ಮನುಷ್ಯನ ಹುನ್ನಾರ."

"ಮಳೆನೀರು ಕೆರೆ , ಬಾವಿ, ನದಿಗಳೆಲ್ಲ ಸೇರಿ ಹರಿದು ಸಮುದ್ರ ಸೇರುತ್ತದೆ. ಸಮುದ್ರದ ನೀರು ಆವಿಯಾಗಿ ಆಕಾಶ ಸೇರುತ್ತದೆ. ಆವಿ ಮೋಡವಾಗಿ, ಮೋಡ ಮಳೆಯಾಗಿ ಭೂಮಿ ಸೇರುತ್ತದೆ. ಬಾಯಾರಿದ ಭೂಮಿ ತೃಪ್ತಿಯಿಂದ ನೀರು ಕುಡಿದು ಒಸರಾಗಿ ಹೊರ ಬಿಡುತ್ತದೆ. ಆ ಒಸರು ಮತ್ತೆ ಸಮುದ್ರ ಸೇರುವ ತವಕದಲ್ಲಿರುತ್ತದೆ. ಈ ಸಹಜ ಕ್ರಿಯೆಯನ್ನೇ ಬದಲಿಸ ಹೊರಟ ಮನುಷ್ಯನ ಅಹಂಕಾರಕ್ಕೆ ನೀರನ್ನು ಸೃಷ್ಟಿಸಲು ಸಾಧ್ಯವಾಗಿಲ್ಲ. ಇಪ್ಪತ್ತನೇ ಶತಮಾನವು ಅಣೆಕಟ್ಟೆಗಳನ್ನು, ಕಾಲುವೆಗಳನ್ನು, ಕೊಳವೆಬಾವಿಗಳನ್ನು ತಂದು ಪ್ರಕೃತಿ ಸಹಜ ಸಂಪತ್ತಿನೊಂದಿಗೆ ಆಟವಾಡಿತು. ನಮ್ಮ ಸಹಜ ಪ್ರಕೃತಿಯ ನೀರಿನ ಮೇಲೆ ಹಲವು ಅತ್ಯಾಚಾರಗಳನ್ನು ಇಂಜಿನಿಯರುಗಳು ಮಾಡಿದರು. ಅರಣ್ಯಗಳನ್ನು ನಾಶ ಮಾಡಿದರು. ನದಿಗಳು ಬತ್ತಿದುವು. ನೀರಿನ ಬದಲಿಗೆ ವಿದ್ಯುಚ್ಛಕ್ತಿ ಕೊಟ್ಟರು. ಸದಾ ಹರಿಯುತ್ತಿದ್ದ ನದಿಗಳು ಬೇಸಿಗೆಯಲ್ಲಿ ಬತ್ತಿ ಮಳೆಗಾಲದಲ್ಲಿ ಮಾತ್ರ ಹರಿಯುವಂತೆ ಮಾಡಿದರು.."

ಪ್ರಕೃತ ಕನ್ನಾಡು ಅನುಭವಿಸುವ ಸಂಕಟಗಳ ಹಿಂದೆ ಅಭಿವೃದ್ಧಿ ಮತ್ತು ಅನಿವಾರ್ಯ ಎಂಬೆರಡು ಶಬ್ದಗಳು ಹೊಸೆದುವು. ಹಾಗಾಗಿ ಕೆರೆಗಳ ನಾಡಲ್ಲಿ ಕೆರೆಗಳನ್ನು ಹುಡುಕುವ ದುಃಸ್ಥಿತಿ. ಹೂಳು ತುಂಬಿ ಕೆರೆಗಳೇ ನಾಪತ್ತೆಯಾಗಿವೆ. ಎಷ್ಟೋ ಕೆರೆಗಳು ಅಭಿವೃದ್ಧಿಯಾಗಿರುವುದು ಕಡತದಲ್ಲಿ ಮಾತ್ರ. ಕೋಟಿ ಕೋಟಿಗಳ ಲೆಕ್ಕಣಿಕೆಯಲ್ಲಿರುವ ನಮ್ಮ ಆಡಳಿತ ವ್ಯವಸ್ಥೆಯು ದೂರಗಾಮಿ ಯೋಜನೆಗಳನ್ನು ಹಾಕಿಕೊಳ್ಳದಿರುವುದರಿಂದ ಸಂಕಟಗಳ ಸರಮಾಲೆಗಳು ಅನುಭವಕ್ಕೆ ಬರುತ್ತವೆ. ರಿಸಾರ್ಟ್, ಓಟು ಬ್ಯಾಂಕ್, ಕೆಸರೆರೆಚಾಟ, ಹಗುರ ಮಾತುಗಳೇ ರಾಜಕಾರಣದ ಅರ್ಹತೆಯಾಗಿರುವ ಪ್ರಕೃತ ದಿನಮಾನದಲ್ಲಿ ಗಟ್ಟಿಯಾಗಿ ನೀರಿನ ದನಿ ಎಬ್ಬಿಸುವ ಕಂಠವು ತ್ರಾಣ ಕಳೆದುಕೊಂಡಿದೆ.

ಆರಂಭದಲ್ಲಿ ಮಾತಿಗೆ ಸಿಕ್ಕ ರೈತರ ಮಾತನ್ನು ಉಲ್ಲೇಖಿಸುತ್ತೇನೆ, "ನಂನಮ್ಮ ನೀರಿನ ಸಮಸ್ಯೆಗೆ ನಮ್ಮಲ್ಲೇ ಪರಿಹಾರವಿದೆ. ನಮ್ಮೂರಲ್ಲಿ ಬಹಳ ಮಿತವಾಗಿ ಮಳೆ ಬರುತ್ತದೆ. ಮಳೆ ಬಂದಾಗ ನೀರನ್ನು ಹಿಡಿದಿಟ್ಟುಕೊಳ್ಳಬೇಕು. ಬೇಕಾದ ವ್ಯವಸ್ಥೆ ಮಾಡಿಕೊಳ್ಳಲು ಸರಕಾರ ಸ್ಪಂದಿಸಬೇಕು. ಚಿಕ್ಕಪುಟ್ಟ ಕೆರೆಗಳ ದುರಸ್ತಿಗಳನ್ನು ಆಯಾಯ ವ್ಯಾಪ್ತಿಯ ರೈತರೇ ಪಕ್ಷ, ಜಾತಿಗಳನ್ನು ಮರೆತು ಮಾಡಬೇಕು. ಬಿಗುಮಾನ ತೊರೆದು ಅಧಿಕಾರಿಗಳು ರೈತರನ್ನು ಒಲಿಸಿಕೊಂಡರೆ ಈ ಕೆಲಸ ದೊಡ್ಡದೇನಲ್ಲ. ನೀರಿನ ಮೂಲಗಳ ಸಂರಕ್ಷಣೆಯಾಗಬೇಕು."

ನೀರಿನ ಹೋರಾಟದ ಕಾವು ಕನ್ನಾಡು ಹಬ್ಬುತ್ತಿದೆ. ಮಳೆಯೂ ಕೈಕೊಡುತ್ತಿದೆ. ಮತಿಯೂ ತಪ್ಪುತ್ತಿದೆ. ಗೌರವಾನ್ವಿತ ಹುದ್ದೆಯಲ್ಲಿರುವವರು ಗೌರವ ಬದಿಗಿರಿಸಿ ಹಗುರವಾಗಿ ಸುದ್ದಿಗಳನ್ನು ಹರಿಯಬಿಡುತ್ತಾರೆ. ರಾಜಕೀಯ ರಕ್ಷಣೆಗಾಗಿ ಸಾಮಾಜಿಕ ಜವಾಬ್ದಾರಿ ಮತ್ತು ವ್ಯವಸ್ಥೆಯನ್ನು ಬಲಿಕೊಡಲು ಹೇಸದ, ನಾವೇ ಆರಿಸಿ ಕಳುಹಿಸಿದ ಜನಪ್ರತಿನಿಧಿಗಳು ಜನಪರವಾಗಿ ನಿಲ್ಲದಿದ್ದರೆ ನಮ್ಮ ಇಂಧನ ಸಚಿವರು ಹೇಳಿದಂತೆ 'ದೇವರೇ ಗತಿ'!

'ಜಲ ಭಾಗ್ಯ' ಮಾನ್ಯ ಮುಖ್ಯಮಂತ್ರಿಗಳೇ, ಹೊಸ ಭಾಗ್ಯ ಯೋಜನೆಯನ್ನು ಘೋಷಿಸುವಿರಾ? ಇದು ಕನ್ನಾಡಿನ ಜನರ ಆದ್ಯತೆಯ ಕೂಗು. ಹಲವು ಭಾಗ್ಯಗಳನ್ನು ರೂಪಿಸಿದ ತಮಗಿದು ಕಷ್ಟವಾಗಲಾರದು. ಈ ಯೋಜನೆ ನಿಜಾರ್ಥದಲ್ಲಿ ಜನಹಿತವಾಗಿರಲಿ. ಜೀವ ಹಿತವಾಗಿರಲಿ.

**—ನಾ . ಕಾರಂತ ಪೆರಾಜೆ**

# ಕೋಲಾರದಲ್ಲಿ ನೀರಿಗಾಗಿ ಹಾಹಾಕಾರ

ಮಾರ್ಚ್ ೩, ೨೦೧೬ರಂದು ಬೆಂಗಳೂರಿನ ಬಳ್ಳಾರಿ ರಸ್ತೆ ರೈತ ಪ್ರತಿಭಟನಾಕಾರರ ಟ್ರಾಕ್ಟರುಗಳಿಂದ ತುಂಬಿ ಹೋಯಿತು. ವಾಹನ ಸಂಚಾರ ಸ್ಥಗಿತವಾಗಿ, ಪೊಲೀಸರು ಕೋಲಾರ ಮತ್ತು ಚಿಕ್ಕಬಳ್ಳಾಪುರದ ೧೦,೦೦೦ ರೈತ ಪ್ರತಿಭಟನಾಕಾರರ ಮೇಲೆ ಲಾಠಿಚಾರ್ಜ್ ಮಾಡಿದರು.

ಆ ಪ್ರತಿಭಟನೆಯ ಮುಂದುವರಿದ ಭಾಗವಾಗಿ ೧೬ ಜೂನ್ ೨೦೧೬ರಿಂದ ನಾಗರಿಕರ ನಿರಂತರ ಧರಣಿ ಆರಂಭ ಕೋಲಾರ ನಗರದ ಕಾಲೇಜ್ ವೃತ್ತದಲ್ಲಿ ತಮ್ಮ ಜಿಲ್ಲೆಯ ನೀರಿನ ಕೊರತೆಗೆ ಸರಕಾರ ಶಾಶ್ವತ ಪರಿಹಾರ ಒದಗಿಸಬೇಕೆಂಬ ಬೇಡಿಕೆ. ಯಾಕೆಂದರೆ, ೨೦೧೬ರಲ್ಲಿಯೂ ಕೋಲಾರದಲ್ಲಿ ಅತ್ಯಲ್ಪ ಮಳೆ. ಶೇಕಡಾ ೫೦ರಷ್ಟು ಬೆಳೆ ನಷ್ಟವಾಗಿ ರೈತರು ಕಂಗಾಲು.



ಚಿತ್ರ ಕೃಪೆ : ಗೂಗಲ್

ಇದು ಕಳೆದ ಹತ್ತು ವರುಷಗಳಿಂದ ಕೋಲಾರದ ಜನರ ನೀರ ಪಾಡು. ನೀರಿಗಾಗಿ ಅಲ್ಲಿನ ಜನರು ಅಂತರ್ಜಲವನ್ನು ಮಿತಿಮೀರಿ ಸೆಳೆಯುವಂತಾಗಿದೆ. ಇದರಿಂದಾಗಿ, ಅಲ್ಲಿ ಅಂತರ್ಜಲದ ಮಟ್ಟ ವಿಪರೀತ ಕುಸಿದಿದೆ. ೨೦೦೬ರಲ್ಲಿ ೪೯ ಅಡಿ ಆಳಕ್ಕಿದ್ದ ಅಂತರ್ಜಲದ ಮಟ್ಟ, ೨೦೧೭ರಲ್ಲಿ ೨೦೨ ಅಡಿಗಳಿಗೆ ಕುಸಿದಿದೆ. ಇದು ಇಡೀ ಕರ್ನಾಟಕ ರಾಜ್ಯದಲ್ಲೇ ಅತ್ಯಂತ ಕೆಳಮಟ್ಟ. ಕೋಲಾರ ಜಿಲ್ಲೆಯ ಎಲ್ಲ ಐದು ತಾಲೂಕುಗಳಲ್ಲಿ ಅಂತರ್ಜಲದ ಬಳಕೆ ಮಿತಿಮೀರಿದೆ. ಮನೆಬಳಕೆಗಾಗಿ ಮತ್ತು ಕೃಷಿಗಾಗಿ ಮೇಲಕ್ಕೆ ಸೆಳೆಯಲು ಇನ್ನು ಅಂತರ್ಜಲವೇ ಇಲ್ಲ ಎಂಬಂತಾಗಿದೆ.

ಕರ್ನಾಟಕದ ಪೂರ್ವ ಗಡಿ ಜಿಲ್ಲೆ ಕೋಲಾರದಲ್ಲಿ ನಿರಂತರ ನೀರಿನಾಸರೆಯಿಲ್ಲ. ಪಾಲಾರ್, ಪೊನ್ನೈಯಾರ್ ಮತ್ತು ಪೆನ್ನಾರ್ ಈ ಮೂರು ನದಿಗಳು ಜಿಲ್ಲೆಯಲ್ಲಿ ಹರಿಯುತ್ತವೆ ಆದರೆ ಮಳೆಗಾಲದ ಕೆಲವೇ ತಿಂಗಳುಗಳಲ್ಲಿ. ಕೋಲಾರ ಜಿಲ್ಲೆಯಲ್ಲಿ ವಾರ್ಷಿಕ ಸರಾಸರಿ ಮಳೆ ೭೪೮ ಮಿಮೀ (ಗಮನಿಸಿ: ಕರ್ನಾಟಕದ ಕರಾವಳಿಯಲ್ಲಿ ಇದು ೩,೭೯೭ ಮಿಮೀ.) ಆದರೆ ಮಳೆ ಎಂಬುದು ಕೋಲಾರದಲ್ಲಿ ತೀರಾ ಅನಿಶ್ಚಿತ. ಅಲ್ಲಿ ೨೦೦೫ರಲ್ಲಿ, ೧,೧೯೫ ಮಿಮೀ ಮಳೆ ಆಗಿದ್ದರೆ, ೨೦೧೬ರಲ್ಲಿ ಕೇವಲ ೫೨೧ ಮಿಮೀ ಮಳೆಯಾಗಿದೆ. ಮಳೆಯೂ ಕಡಿಮೆ, ಜಲಮರುಪೂರಣದ ವ್ಯವಸ್ಥೆಗಳೂ ಕಡಿಮೆ ಎಂಬ ಪರಿಸ್ಥಿತಿಯಲ್ಲಿ ೨,೦೦೦ದಿಂದೀಚೆಗೆ ರೈತರು ಕೊಳವೆಬಾವಿಗಳನ್ನು ಕೊರೆಯ ತೊಡಗಿದರು.

ಇದು ಯಾವ ಹಂತಕ್ಕೆ ತಲಪಿದೆಯೆಂದರೆ, ೨೦೧೧ರಿಂದ ೨೦೧೫ರ ವರೆಗಿನ ಕೇವಲ ನಾಲ್ಕು ವರುಷಗಳಲ್ಲಿ ಕೋಲಾರ ಜಿಲ್ಲೆಯಲ್ಲಿ ಕೊಳವೆಬಾವಿಗಳ ಸಂಖ್ಯೆಯಲ್ಲಿ ಆಗಿರುವ ಹೆಚ್ಚಳ ಶೇಕಡಾ ೬೪. ಕೇಂದ್ರ ಅಂತರ್ಜಲ ಮಂಡಲಿಯ ಅಂಕೆಸಂಖ್ಯೆಗಳ ಪ್ರಕಾರ ಕೋಲಾರದ ಕೊಳವೆಬಾವಿಗಳ ಸಂಖ್ಯೆ ೮೪,೨೮೭. ಇದು ಕರ್ನಾಟಕದ ಜಿಲ್ಲೆಗಳಲ್ಲಿ ಅತ್ಯಧಿಕ. ಆದರೆ, "ನೀರಿಗಾಗಿ ಪ್ರತಿಭಟನೆ"ಯ ಮುಂದಾಳುಗಳಲ್ಲಿ ಒಬ್ಬರಾದ ಹೊಳಲಿ ಪ್ರಕಾಶ ಹೇಳುವಂತೆ, ಈ ಮಾಹಿತಿ ಸರಿಯಲ್ಲ. ಕೋಲಾರದಲ್ಲಿ ೧,೨೫,೦೦೦ ಕೊಳವೆಬಾವಿಗಳಿವೆ ಎಂಬುದು ಅವರ ಅಂದಾಜು. ನೀರಿನ ಕೊರತೆಯಿಂದಾಗಿ, ಪ್ರಕಾಶ್ ಸಹಿತ ಹಲವು ರೈತರು ಹೆಚ್ಚು ನೀರು ಬೇಕಾಗುವ ಭತ್ತ ಮತ್ತು ಕಬ್ಬು ಬೆಳೆಸುವುದನ್ನು ತೊರೆದು, ಕಡಿಮೆ ನೀರು ಸಾಕಾಗುವ ಹಿಪ್ಪುನೇರಳೆ, ಸಿರಿಧಾನ್ಯಗಳು ಹಾಗೂ ತರಕಾರಿಗಳನ್ನು ಬೆಳೆಯತೊಡಗಿದ್ದಾರೆ.

ಕೋಲಾರ ಜಿಲ್ಲೆಯ ಬಹುಪಾಲು ಜನರದು ಕೃಷಿ ಅವಲಂಬಿಸಿದ ಬದುಕು. ಅವರ ಸಂಕಟಗಳಿಗೆ ಕೊನೆಯೇ ಇಲ್ಲ ಎಂಬಂತಾಗಿದೆ. ಅಂತರ್ಜಲದ ಮಟ್ಟ ವರುಷದಿಂದ ವರುಷಕ್ಕೆ ಕುಸಿಯುತ್ತಿದೆ. ಇದರಿಂದಾಗಿ ಕೊಳವೆಬಾವಿಗಳೂ ಬತ್ತಿ ಹೋಗುತ್ತಿವೆ. ಜಿಲ್ಲಾಡಳಿತ ೨೦೧೭ರಲ್ಲಿ ಕೊರೆಸಿದ ೧,೭೦೦ ಕೊಳವೆಬಾವಿಗಳಲ್ಲಿ ಸುಮಾರು ೫೦೦ರಲ್ಲಿ ನೀರೇ ಸಿಗಲಿಲ್ಲ ಎನ್ನುತ್ತಾರೆ ಐಬಿಎಂ ಉದ್ಯೋಗಿ ಜಲಕಂಠ. ಕೋಲಾರದ ಹಿರಿಯ ಭೂವಿಜ್ನಾನಿ ಎಂ. ತಿಪ್ಪೇಸ್ವಾಮಿ ನೀಡುವ ಮಾಹಿತಿ ಹೀಗಿದೆ: ಜಿಲ್ಲೆಯ ಶೇಕಡಾ ೪೦ರಷ್ಟು (ಅಂದರೆ ೮೪,೨೮೭ರಲ್ಲಿ ೩೩,೭೧೫) ಕೊಳವೆಬಾವಿಗಳು ಬರಿದಾಗಿವೆ. ಇದರಿಂದಾಗಿ ಜನರು ಇನ್ನಷ್ಟು ಆಳಕ್ಕೆ ಕೊಳವೆಬಾವಿ ಕೊರೆಸತೊಡಗಿದರು. ಇಸವಿ ೨೦೦೦ದಿಂದ ೨೦೦೨ರ ವರೆಗೆ ೩೦೦ ಅಡಿ ಆಳಕ್ಕೆ ಕೊರೆಸುತ್ತಿದ್ದರೆ, ಈಗ ೨೦೧೭ರಲ್ಲಿ ೧,೮೦೦ ಅಡಿ ಆಳಕ್ಕೆ ಲಗ್ಗೆಯಿಡುತ್ತಿದ್ದಾರೆ! ಕೋಲಾರದ ಕೊಳವೆಬಾವಿಗಳ ಸರಾಸರಿ ಆಳ ೧,೨೯೦ ಅಡಿ. ಈ ಆಳಕ್ಕೆ ಒಂದು ಕೊಳವೆಬಾವಿ ಕೊರೆಸುವ ವೆಚ್ಚ ರೂ. ೬,೮೮,೦೦೦. ಈ ಲೆಕ್ಕಾಚಾರದಂತೆ ಬತ್ತಿಹೋಗಿರುವ ೩೩,೭೧೫ ಕೊಳವೆಬಾವಿಗಳಿಂದಾಗಿ ರೂ. ೨,೩೧೯ ಕೋಟಿ ಮಣ್ಣು ಪಾಲಾಗಿದೆ!

ಕೋಲಾರ ಜಿಲ್ಲೆಯ ನೀರಿನ ಸಂಕಟಕ್ಕೆ ಕೊಳ್ಳಿಯಿಟ್ಟದ್ದು ನೀಲಗಿರಿ ತೋಟಗಳು. ಪ್ರತಿಯೊಂದು ನೀಲಗಿರಿ ಮರ ದಿನಕ್ಕೆ ೧೫ ೨೦ ಲೀಟರ್ ನೀರನ್ನು ನೆಲದಾಳದಿಂದ ಹೀರಿ ಎಲೆಗಳ ಮೂಲಕ ಆವಿಯಾಗಿಸುತ್ತದೆ. ೧೯೬೦ರ ದಶಕದಲ್ಲಿ ಅರಣ್ಯೀಕರಣದ ಹೆಸರಿನಲ್ಲಿ ಆಸ್ಟ್ರೇಲಿಯಾದ ಈ ಮರವನ್ನು ಕೋಲಾರಕ್ಕೆ ಪರಿಚಯಿಸಿದ್ದು ಅರಣ್ಯ ಇಲಾಖೆ. ಯಾವುದೇ ಪೋಷಣೆ ಅಗತ್ಯವಿಲ್ಲದ ನೀಲಗಿರಿ ಗಿಡಗಳು ಬೆಳೆದು ಏಳು ವರುಷಗಳಲ್ಲಿ ಕಟಾವಿಗೆ ತಯಾರು. ಇದನ್ನು ಬೆಳೆಸುವ ವೆಚ್ಚ ಹೆಕ್ಟೇರಿಗೆ ರೂ.೮,೮೦೦. ಇದರಿಂದ ಆದಾಯ ರೂ. ೪೦,೦೦೦. ನೀಲಗಿರಿ ತೋಟಗಳು ಅಂತರ್ಜಲ ಕುಸಿತಕ್ಕೆ ಕಾರಣ ಎಂಬುದನ್ನು ಅಧ್ಯಯನಗಳು ಸಾಬೀತು ಪಡಿಸಿವೆ. ಅನಂತರ ಎಚ್ಚೆತ್ತುಕೊಂಡ ರಾಜ್ಯ ಸರಕಾರ, ಅರಣ್ಯ ಇಲಾಖೆಗೆ ಹೀಗೆಂದು ಆದೇಶ ನೀಡಿದೆ: ಬರಡು ಜಮೀನಿನಲ್ಲಿ ಮಾತ್ರ ನೀಲಗಿರಿ ಬೆಳೆಸಬೇಕು. ಆದರೆ, ಖಾಸಗಿ ಜಮೀನಿನಲ್ಲಿ ನೀಲಗಿರಿ ಬೆಳೆಸುವುದನ್ನು ನಿಷೇಧಿಸಲಾಗಿಲ್ಲ!



ಚಿತ್ರ ಕೃಪೆ : ಗೂಗಲ್

ಜಿಲ್ಲಾಡಳಿತ ಏನು ಮಾಡುತ್ತಿದೆ? ೨೦೧೦ರಿಂದ ೨೦೧೬ರ ಅವಧಿಯಲ್ಲಿ ತೋಟಗಾರಿಕೆ ಇಲಾಖೆ ೨೦೦ ರೈತರು ಕೃಷಿ ಹೊಂಡ ನಿರ್ಮಿಸಲು ನೆರವು ನೀಡಿದೆ; ೨೦ ಸಮುದಾಯ ಕೃಷಿ ಹೊಂಡಗಳ ನಿರ್ಮಾಣಕ್ಕೂ ಸಹಾಯ ಮಾಡಿದೆ (ರಾಷ್ಟ್ರೀಯ ತೋಟಗಾರಿಕಾ ಮಿಷನ್ ಅನುಸಾರ). ಮೇವಿಲ್ಲದೆ ಸೊರಗಿರುವ ಸಾವಿರಾರು ಜಾನುವಾರುಗಳಿಗೆ ಈ ಬೇಸಗೆಯಲ್ಲಿ ವಾರಕ್ಕೆ ಎರಡು ಸಲ ಮೇವು ಒದಗಿಸಲು ಪಶುಸಂಗೋಪನಾ ಇಲಾಖೆ ಮಾಡಿರುವ ವ್ಯವಸ್ಥೆ ಏನೇನೂ ಸಾಲದಾಗಿದೆ. "ಎತ್ತಿನ ಹೊಳೆ ಯೋಜನೆ' ಮೂಲಕ ಪಶ್ಚಿಮ ಘಟ್ಟದಿಂದ ಕೋಲಾರಕ್ಕೆ ನೀರು ತರುವ ಪ್ರಯತ್ನ ನೆನೆಗುದಿಗೆ ಬಿದ್ದಿದೆ.

ಕೋಲಾರ ಜಿಲ್ಲೆಯಲ್ಲಿ ಶತಮಾನಗಳಿಂದ ಜನರು ಬದುಕು ಸಾಗಿಸುತ್ತಿದ್ದಾರೆ. ಅಲ್ಲಿ ಪೂರ್ವಿಕರು ಮಳೆನೀರನ್ನು ಸರಣಿ ಕೆರೆಗಳಲ್ಲಿ ಹಿಡಿದಿಟ್ಟು ನೀರಿನ ಬವಣೆಯಿಂದ ಪಾರಾಗುತ್ತಿದ್ದರು. ನಾವು ಇಂದು ಅಲ್ಲಿನ ಚರಿತ್ರೆಯಿಂದ ಪಾಠ ಕಲಿಯಬೇಕಾಗಿದೆ. ಅಲ್ಲಿನ ಜಮೀನಿಗೆ ಬೀಳುವ ಮಳೆಯನ್ನೆಲ್ಲ ಇಂಗಿಸಬೇಕಾಗಿದೆ. ಇದು, ಈ ವರುಷ ಉತ್ತಮ ಮಳೆಯಾಗುವ ಮುನ್ಸೂಚನೆಗಳ ಹಿನ್ನೆಲೆಯಲ್ಲಿ ತುರ್ತಾಗಿ ಆಗಬೇಕಾದ ಕೆಲಸ. ಜೊತೆಗೆ, ಹೆಚ್ಚು ನೀರು ಬೇಕಾಗುವ ಬೆಳೆಗಳ ಬದಲಾಗಿ ಕಡಿಮೆ ನೀರು ಸಾಕಾಗುವ ಬೆಳೆಗಳನ್ನು ಬೆಳೆಸಬೇಕಾಗಿದೆ. ಸಿರಿಧಾನ್ಯಗಳು ಕಿಲೋಕ್ಕೆ ರೂ.೮೦ರಿಂದ ರೂ.೧೨೦ ದರದಲ್ಲಿ ನಗರಗಳಲ್ಲಿ ಈಗ ಮಾರಾಟ ಆಗುತ್ತಿರುವ ಕಾರಣ, ಅವುಗಳ ಬೇಸಾಯ ಸೂಕ್ತ ಆಯ್ಕೆ. ಹಾಗೂ, ನೀರು ನುಂಗುವ ನೀಲಗಿರಿಯಂತಹ ಮರ ಬೆಳೆಸುವುದನ್ನು ತಾವಾಗಿಯೇ ತೊರೆಯಬೇಕಾಗಿದೆ. ಈ ಕ್ರಮಗಳನ್ನು ಅಳವಡಿಸಿದರೆ, ಮುಂದಿನ ಬೇಸಗೆಯಲ್ಲಿ ಕೋಲಾರದಲ್ಲಿ ನೀರಿಗಾಗಿ ಹಾಹಾಕಾರ ಇಲ್ಲವಾದೀತು, ಅಲ್ಲವೇ?

**—ಅಡ್ಡೂರು ಕೃಷ್ಣ ರಾವ್**

# ಮಿಶ್ರ ಬೆಳೆ ಬೇಸಾಯ

ವಾಣಿಜ್ಯ ಬೆಳೆಗಳು ಹೆಚ್ಚು ಹಣ ಕೊಡಬಲ್ಲವು. ಇದೊಂದೇ ಕಾರಣದಿಂದಾಗಿ ರೈತರು ಒಂದೇ ಬೆಳೆಯನ್ನು ಬೆಳೆಯತೊಡಗಿದರು. ಅದೇ ಹೊಲದಲ್ಲಿ ಮತ್ತೆ ಮತ್ತೆ ಭತ್ತವನ್ನೋ, ಕಬ್ಬನ್ನೋ, ತಂಬಾಕನ್ನೋ, ಬದನೆಯನ್ನೋ, ಬೆಳೆದರು. ಇದರಿಂದಾಗಿ ಹಲವಾರು ದುಷ್ಪರಿಣಾಮಗಳಾದವು. ಅಧಿಕ ಇಳುವರಿ ಕೊಡುವ ಹತ್ತಿ, ಭತ್ತ, ಟೊಮ್ಯಾಟೋ ಮತ್ತು ಕಬ್ಬನ್ನು ಬೆಳೆಯುವತ್ತ ವಿಜ್ಞಾನಿಗಳು ರೈತರನ್ನು ಆಕರ್ಷಿಸಿದರು. ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕು ಇದಕ್ಕೆ ಉತ್ತಮ ನಿದರ್ಶನ ಎನಿಸಿದೆ. ಡಿಸಿಎಚ್ ಹತ್ತಿಯನ್ನು ನೀರಾವರಿ ಮತ್ತು ಒಣಬೇಸಾಯದಲ್ಲಿ ಬೆಳೆಯತೊಡಗಿದ ರೈತರು ಆರಂಬದಲ್ಲಿ ಉತ್ತಮ ಇಳುವರಿ ಪಡೆರದಷ್ಟೇ ಅಲ್ಲ. ಉತ್ಕೃಷ್ಟ ಗುಣಮಟ್ಟದ ಹತ್ತಿಯನ್ನು ಬೆಳೆದರು. ಅದು ಬಹಳ ವರ್ಷ ಉಳಿಯಲಿಲ್ಲ. ಅದಕ್ಕೆ ಕಾರಣ ಹತ್ತಿಯನ್ನೇ ಪ್ರತಿವರ್ಷ ಬಿತ್ತಿದ ಹೊಲದಲ್ಲಿ ಬೆಳೆಯತೊಡಗಿದ್ದು ರೈತರಿಗೆ ಈ ಬೆಳೆ ಎಷ್ಟು ಉತ್ತಮ ಎನಿಸಿತ್ತೋ ಅಷ್ಟೆ ಕೆಟ್ಟ ಬೆಳೆ ಎನಿಸಿತು. ಉಳಿದ ಬೆಳೆಗಳನ್ನು ಮಾಡುವುದನ್ನೇ ಬಿಟ್ಟರು. ಹತ್ತಿ ಬೆಳೆ ಬೆಳೆದು ಹಾಳಾಗಿ ಹೋದರು. ಹೀಲಿಯೋಥಿಸ್ ಕೀಟದ ಹಾವಳಿಗೆ ತುತ್ತಾಗಿ ಹತ್ತಿ ಬೆಳೆ ಒಂದೇ ಅಲ್ಲ. ಎಲ್ಲ ಬೆಳೆಗಳಿಗೂ ಈ ಕೀಟ ಬಾಧಿಸುವಂತಾಯಿತು. ಇದರಂತೆ ನೀರಾವರಿ ಪ್ರದೇಶದಲ್ಲಿ ಭತ್ತ ಬೆಳೆಯುವುದಾಗಲಿ, ಕಬ್ಬು ಬೆಳೆಯುವುದಾಗಲಿ ಒಂದೇ ಬೆಳೆಯನ್ನು ಮಾಡಿದ ಹೊಲದಲ್ಲಿ ಮತ್ತೆ ಮತ್ತೆ ಅದೇ ಬೆಳೆ ಮಾಡಿ ರೈತರು ಹಾನಿಗೊಳಗಾದರು. ಇದನ್ನೆಲ್ಲ ಹೋಗಲಾಡಿಸಲು



ಮಿಶ್ರಬೆಳೆ ಮಾಡುವುದೇ ಉತ್ತಮ ಪರಿಹಾರ ಎನಿಸಿದೆ . ಒಂದು ಹೊಲದಲ್ಲಿ ಒಂದೇ ಬೆಳೆ ಬೆಳೆದಾಗ ಕೀಟಗಳ ವಂಶ ವೃದ್ಧಿಯಾಗುತ್ತದೆ. ಬೆಳೆದ ಫಸಲು ಕೀಟಗಳಿಗೆ ಆಹಾರವಾಗಿ ರೈತರು ಹಾನಿಗೊಳಗಾಗುತ್ತಾರೆ. ಒಂದೇ ಬೆಳೆ ಮಾಡುವುದರಿಂದ ಬೆಳೆಗಳು ಅದೇ ಸತ್ವವನ್ನು ಹೀರಿ ಭೂಮಿ ಬಡವಾಗುತ್ತದೆ . ಆದ್ದರಿಂದ ಪರ್ಯಾಯ ಬೆಳೆಗಳನ್ನು ಮಾಡುವುದಾಗಲಿ, ಮಿಶ್ರ ಬೆಳೆ ಮಾಡುವುದಾಗಲಿ ಅನಿವಾರ್ಯ ಎನಿಸಿದೆ. ಬೆಳೆಗಳಲ್ಲಿ ಏಕದಳ ಮತ್ತು ದ್ವಿದಳ ಧಾನ್ಯಗಳ ಬೆಳೆಗಳಿವೆ. ಜೋಳ , ಗೋವಿನಜೋಳ, ಗೋಧಿ, ಸಾಂವಿ, ಭತ್ತದಂತಹ ಬೆಳೆಗಳು ಏಕದಳ ಧಾನ್ಯಗಳಾಗಿವೆ. ಕಡಲೆ, ಹೆಸರು, ಉದ್ದು , ಶೇಂಗಾ, ತೊಗರಿ ಮೊದಲಾದವು ದ್ವಿದಳ ಧಾನ್ಯಗಳಾಗಿವೆ. ಮಿಶ್ರ ಬೆಳೆ ಮಾಡುವುದರಿಂದ ರೈತರು ಹೆಚ್ಚು ಇಳುವರಿ ಪಡೆಯಲು ಸಾಧ್ಯವಿದೆ ಮತ್ತು ಉತ್ಪಾದನಾ ವೆಚ್ಚ ಕಡಿಮೆಯಾಗುತ್ತದೆ. ಹೊಲದ ಫಲವತ್ತತೆ ಕಡಿಮೆ ಆಗಲಾರದು.

**ಅಕ್ಕಡಿ ಬೆಳೆ :** ಮಿಶ್ರ ಬೆಳೆಗೆ ಇನ್ನೊಂದು ಹೆಸರು ಅಕ್ಕಡಿ ಬೆಳೆ. ಅಕ್ಕಡಿ ಬೆಳೆಯಲ್ಲಿ ದಿಂಡಕ್ಕಡಿ ಮತ್ತು ಅಕ್ಕಡಿ ಬೆಳೆ ಎಂದು ಎರಡು ಪ್ರಕಾರಗಳಿವೆ. ಎರಡು ಸಾಲು ಶೇಂಗಾ ಇಲ್ಲವೇ ಹೆಸರು ಹಾಕಿ ಒಂದು ಸಾಲು ಹತ್ತಿ ಬೆಳೆಯುವುದಕ್ಕೆ ದಿಂಡಕ್ಕಡಿ ಎಂದು ಕರೆಯುತ್ತಾರೆ. ಎರಡು ಸಾಲು ಜೋಳ ಒಂದು ಸಾಲು ಹೆಸರು ಮತ್ತೆ ಎರಡು ಸಾಲು ಜೋಳ ನಂತರ ಒಂದು ಸಾಲು ತೊಗರಿ ಹಾಕುವುದು ಅಕ್ಕಡಿ ಬೆಳೆ ಎನಿಸಿಕೊಳ್ಳುತ್ತದೆ. ಐದು ಸಾಲು ಕಡಲೆ ಇಲ್ಲವೆ ಐದು ಸಾಲು ಗೋಧಿ ನಂತರ ಒಂದು ಸಾಲು ಕುಸುಬೆ ಬೆಳೆಯುತ್ತಾರೆ. ಇದು ಪರಂಪರಾಗತವಾಗಿ ಬಂದ ಮಿಶ್ರಬೆಳೆ ಪದ್ಧತಿಯಾಗಿದ್ದು, ಕೃಷಿಯಲ್ಲಿ ಆಧುನಿಕತೆ ಅಳವಡಿಸಿಕೊಳ್ಳಲು ಹೋಗಿ ಅನಾಹುತ ಆಗಿದೆ. ಹೀಗೆ ಮಿಶ್ರ ಬೆಳೆ ಮಾಡುವುದು , ಲಾಭದಾಯಕ ಹಾಗೂ ಹೊಲಕ್ಕೆ ಹೊಲದ ಮಣ್ಣಿಗೆ ಹಿತಕಾರಕ ಎನಿಸಿದೆ. ಏಕದಳ , ದ್ವಿದಳ ಬೆಳೆಗಳ ಮಿಶ್ರಣದಿಂದಾಗಿ ಬೆಳೆಗಳು ಪೋಷಕಾಂಶಗಳನ್ನು ಹೀರಿಕೊಳ್ಳುವಲ್ಲಿ ಸ್ಪರ್ಧೆ ಇರಲಾರದು. ಕೀಟ ಹಾಗೂ ರೋಗಗಳ ಬಾಧೆ ಕಡಿಮೆಯಾಗುವುದು. ಬೆಳೆಗಳು ಒಂದು ಬೆಳೆ ಕಟಾವು ಆದ ನಂತರ ಇನ್ನೊಂದು ಕಟಾವಿಗೆ ಬರುತ್ತವೆ. ಉದಾಹರಣೆಗೆ ಶೇಂಗಾ, ಹೆಸರು , ಜೋಳದಂತಹ ಬೆಳೆಗಳು ಮೊದಲು ಕಟಾವಿಗೆ ಬರುತ್ತವೆ. ಹತ್ತಿ ನಂತರ ಕಟಾವಿಗೆ ಬರುತ್ತದೆ. ಅದರಂತೆ ಗೋಧಿ, ಕಡಲೆ ಹಿಂಗಾರಿಯಲ್ಲಿ ಬೇಗ ಕಟಾವಿಗೆ ಬಂದರೆ ಕುಸುಬೆ ನಂತರ ಕಟಾವಿಗೆ ಬರುತ್ತದೆ.

**ಸಂಗಾತಿ ಬೆಳೆಗಳು :** ಈ ಮಿಶ್ರ ಬೆಳೆಗಳು ಸಂಗಾತಿ ಬೆಳೆಗಳೂ ಆಗಿವೆ. ಒಂದು ಬೆಳೆ ಇನ್ನೊಂದು ಬೆಳೆಗೆ ಪೂರಕ ಹಾಗೂ ಪ್ರೇರಕ ಎನಿಸಿದೆ. ಇಲ್ಲಿ ಪೋಷಕಾಂಶಗಳ ಕೊರತೆಯಾಗದು. ಬದಲಾಗಿ ದ್ವಿದಳ ಧಾನ್ಯಗಳಲ್ಲಿರುವ ಬೇರಿನ ಗಂಟಿನಲ್ಲಿ ಸಾರಜನಕದ ಸತ್ವ ಇದ್ದು ಅದು ಪಕ್ಕದ ಸಾಲಿನಲ್ಲಿ ಬೆಳೆದ ಏಕದಳ ಧಾನ್ಯದ ಬೆಳೆಗೆ ಪೂರಕವಾಗಿದೆ. ಕಡಲೆಗೆ ಬೇಕಾದ ಸತ್ವಗಳು ಪೋಷಕಾಂಶಗಳು ಕಸುಬೆಗೆ ಬೇಕಿಲ್ಲ. ಅವುಗಳಲ್ಲಿ ಒಂದು ರೀತಿಯ ಸಹಬಾಳ್ವೆ ಇದೆ. ಇದೇ ಮಾತು ಜೋಳ, ತೊಗರಿ, ಹೆಸರು ಬೆಳೆಗಳಿಗೂ ಅನ್ವಯಿಸುತ್ತದೆ. ಈ ಸಂಗಾತಿ ಬೆಳೆಗಳಲ್ಲಿ ಹಲವಾರು ವೈವಿಧ್ಯಮಯ ಬೆಳೆಗಳನ್ನೂ ಬೆಳೆಯಬಹುದಾಗಿದೆ . ಅದೂ ಒಂದೇ ಹೊಲದಲ್ಲಿ. ಉದಾಹರಣೆಗೆ ಹೇಳಬೇಕಾದರೆ ಉಳ್ಳಾಗಡ್ಡೆ, ಸಬ್ಬಸಿಗಿ, ಕೋತುಂಬರಿ, ಬದನೆ, ಬೆಳ್ಳುಳ್ಳಿ ಹೀಗೆ ಮಿಶ್ರ ಬೆಳೆ ಮಾಡಬಹುದಾಗಿದೆ. ಅದರಂತೆ ಜೋಳ, ಹೆಸರು, ಅಲಸುಂದೆ , ತೊಗರಿ, ಪುಂಡಿ ಮೊದಲಾದ ಬೆಳೆ ಮಿಶ್ರಬೆಳೆ ಮಾಡಬಹುದು. ಸಾಂವಿ ಬಿತ್ತಿದ ಹೊಲದಲ್ಲಿ ತೊಗರಿಯನ್ನು ಅಕ್ಕಡಿ ಬೆಳೆಯಾಗಿ ಹಾಗೂ ಸಾಂವಿ ಹೊಡೆ ಹಾಕುವ ಸಂದರ್ಭದಲ್ಲಿ ಜೈಧರ ಹತ್ತಿ, ಜೈಧರ ಹತ್ತಿಯಲ್ಲಿ, ಬಿಳಿ ಜೋಳ, ಹುರುಳಿ, ಅಗಸೆ ಬಿಳಿ ಎಳ್ಳು ಸಹಿತ ಮಿಶ್ರ ಬೆಳೆ ಮಾಡಬಹುದಾಗಿದೆ. ಮೆಣಸಿನ ಗಿಡದಲ್ಲಿ ಜೈಧರ ಹತ್ತಿಯನ್ನು ಮಿಶ್ರ ಬೆಳೆಯನ್ನಾಗಿ ಬೆಳೆಯಲಾಗುತ್ತದೆ. ಇಷ್ಟೆಲ್ಲಾ ಮಿಶ್ರಬೆಳೆ ಮಾಡಿದರೂ ಇಳುವರಿಯಲ್ಲಿ ಹೆಚ್ಚು ಕಡಿಮೆಯಾಗದು. ಒಂದು ಬೆಳೆಯ ಧಾರಣೆ ಕುಸಿದರೆ, ಇನ್ನೊಂದು ಬೆಳೆಗಾದರೂ ಧಾರಣೆ ಸಿಗುತ್ತದೆ.

**ಪರ್ಯಾಯ ಬೆಳೆಗಳು :** ಮುಂಗಾರಿನಲ್ಲಿ ಒಂದು ಬೆಳೆ ಮಾಡಿದ ನಂತರ ಹಿಂಗಾರಿಯಲ್ಲಿ ಬೇರೆ ಬೆಳೆ ಮಾಡಬೇಕು. ಇದೂ ಸಾಂಪ್ರದಾಯಿಕ ಒಕ್ಕಲುತನದ ಕ್ರಮವಾಗಿದೆ. ಮಲೆನಾಡಿನಲ್ಲಿ ಈಗಲೂ ಭತ್ತವನ್ನೂ ಬೆಳೆದು ನಂತರ ಹಿಂಗಾರಿಯಲ್ಲಿ ಕಡಲೆ, ಅಗಸೆ, ಹೆಸರು, ಅವರೆಯಂತಹ ಬೆಳೆಗಳನ್ನು ಕಡೇ ಫಲ ಎಂದು ಈಗಲೂ ಬೆಳೆಯಲಾಗುತ್ತಿದೆ. ಮುಂಗಾರಿಯಲ್ಲಿ ಹೆಸರು ಬೆಳೆದ ಹೊಲದಲ್ಲಿ ಗೋಧಿ ಚೆನ್ನಾಗಿ ಬರುತ್ತದೆ. ಅದರಂತೆ ಶೇಂಗಾ ಬೆಳೆದ ಹೊಲದಲ್ಲಿ ಗೋಧಿ ಚೆನ್ನಾಗಿ ಬರುತ್ತದೆ. ಇದೇ ಮಾತು ಹಸಿರುಕ್ರಾಂತಿಯ ಕೊಡುಗೆಗಳಾದ ಹೈಬ್ರಿಡ್ ತಳಿಯ ಬೆಳೆಗಳಿಗೆ ಅನ್ವಯಿಸುತ್ತದೆ. ಯಾಕೆಂದರೆ ಒಂದೇ ಬೆಳೆ ಒಂದು ಹೊಲಕ್ಕೆ ಸೀಮಿತವಾಗಿದೆ.



**ಪ್ರಯೋಜನಗಳು :** ಮಿಶ್ರ ಬೆಳೆ ಮಾಡುವುದರಿಂದ ಬೆಳೆಗಳು ಒಂದಾದ ನಂತರ ಇನ್ನೊಂದು ಕಟಾವಿಗೆ ಬರುತ್ತವೆ. ಹೀಗಾಗಿ ಕೃಷಿ ಕೂಲಿಕಾರರ ಅಭಾವವಿರುವ ಇಂದಿನ ದಿನಗಳಲ್ಲಿ ಮಿಶ್ರ ಬೆಳೆ ಹೆಚ್ಚು ಪ್ರಯೋಜನಕಾರಿ ಎನಿಸಿದೆ. ಒಂದು ಬೆಳೆ ನಷ್ಟವಾದರೆ ಇನ್ನೊಂದು ಬೆಳೆ ಬಂದೇ ಬರುವುದೆಂಬ ಭರವಸೆ ಇರುತ್ತದೆ. ಆಯಾ ಸಂಧರ್ಭಕ್ಕನುಸರಿಸಿ ಬೆಳೆಗಳು ಮಾಗಿ ನಿರಂತರ ಉತ್ಪನ್ನ ಬರುತ್ತದೆ. ಹೀಗೆ ಮಾಡಿದಾಗ ನಿರಂತರ ಆದಾಯ ಬರುತ್ತದೆ. ದನಕರುಗಳಿಗೆ ಮೇವು ದೊರಕುತ್ತದೆ.

— ಈರಯ್ಯ ಕಿಲ್ಲೇದಾರ.

# ಐತಿಹ್ಯ ಲೋಕದಲ್ಲೊಂದು ಇಣುಕು ನೋಟ.



ಕರಾವಳಿಯ ಹಾಲಕ್ಕಿ ಕೊಪ್ಪದಲ್ಲಿ ಒಮ್ಮೆ ಎಮ್ಮೆ ಕರು ಸಾವನಪ್ಪಿತು. ಅದನ್ನು ತಲೆಯ ಮೇಲೆ ಹೊತ್ತು ಕಾಡಿಗೆ ಎಸೆದರು. ಆಗ ಬಿಗಿಯಾದ ಕಟ್ಟುಕಟ್ಟಲೆ ಕಾಲ. ಸಭೆ ಸೇರಿದ ಸಮುದಾಯದ ಜನ ಕೃತ್ಯ ಖಂಡಿಸಿದರು. ಸತ್ತ ಎಮ್ಮೆ ಕರುವನ್ನು ತಲೆಯ ಮೇಲೆ ಹೊರಬಾರದು, ಹೊತ್ತ ತಪ್ಪಿಗೆ ಇಡೀ ಕುಟುಂಬ ಬಹಿಷ್ಕಾರದ ಶಿಕ್ಷೆಗೆ ಒಳಗಾಯಿತಂತೆ! ನಂತರ ಈ ಕುಟುಂಬ ಘಟ್ಟವೇರಿತು. ಶಿರಸಿ ಕಾಡುಗಳಲ್ಲಿ ನೆಲೆಯೂರಿತು, ಅವರು ಶೀಲಿಗರೆಂದು ಹೆಸರಾದರು. ಘಟನೆ ಯಾವ ಕಾಲದಲ್ಲಿ ನಡೆಯಿತು ಎಂಬ ಬಗೆಗೆ ದಾಖಲೆಗಳಿಲ್ಲ. ಕಳೆದ ಹದಿನೈದು ವರ್ಷದ ಹಿಂದೆ ಶೀಲಿಗರ ಬಗೆಗೆ ಮಾಹಿತಿ ಸಂಗ್ರಹಿಸಿದಾಗ ಶಿರಸಿ, ಯಲ್ಲಾಪುರ ತಾಲೂಕುಗಳ ಸುಮಾರು 75 ಮನೆಗಳಿಂದ 455 ಜನ ಇರುವ ಸಂಗತಿ ತಿಳಿದಿತ್ತು! ಇಲ್ಲಿ ಬಿಟ್ಟರೆ ಮತ್ತೆ ಎಲ್ಲಿಯೂ ಸಿಗದ ಸಣ್ಣ ಸಮುದಾಯ ಇದು.

ಒಮ್ಮೆ ಶೀಲಿಗ ಜನಾಂಗದ ಕಪ್ಪರಮನೆ ಹಳ್ಳಿಗ ಹುಲಿಯಾ ಗೌಡರಲ್ಲಿ ಜಾನಪದ ಮಾಹಿತಿ ಸಂಗ್ರಹಿಸುತ್ತಿದ್ದೆ, ಬರೋಬ್ಬರಿ ಹದಿನೈದು ತಾಸು ಹಾಡಿದರೂ ಮುಗಿಯದ ಅಂಟಿಕೆ ಪಂಟಿಕೆ ಹಾಡು ಈ ಅಜ್ಜನಲ್ಲಿತ್ತು! ದೀಪಾವಳಿಯಲ್ಲಿ ಶೀಲಿಗರು ಹಾಡುವ ಅಂಟಿಕೆ ಹಾಡಿನಲ್ಲಿ ಹಾಲಕ್ಕಿ ಜನಾಂಗದ ಹುಟ್ಟಿನ ಸ್ವಾರಸ್ಯಕರ ಕತೆಯಿದೆ. ಬಲಿಯೇಂದ್ರ ರಾಜ್ಯದಲ್ಲಿ ಏನೇನು ಬೆಳಿಯೋರು ಎಂಬ ಪ್ರಶ್ನೆ ಮುಂದಿಟ್ಟು ಹಾಡು ಆರಂಭವಾಗುತ್ತದೆ. ಹದಿನೆಂಟು ಕುಲದ ಫಲ ಬೆಳೆಯುತ್ತಾರೆ. ಅಕ್ಕಿ , ಕುಂಬಳ, ಸೌತೆ ಬೆಳೆಯುವುದರಿಂದ ಬಲಿಚಕ್ರವರ್ತಿ ಸುಖವಾಗಿ ಇದ್ದಾನೆಂದು ಹೇಳುತ್ತಾರೆ! ಊಟ ಮುಗಿಸಿ ತೂಗುಯ್ಯಾಲೆಯಲ್ಲಿ ಮಲಗಿದ ಬಲಿಚಕ್ರವರ್ತಿಗೆ ನರಕ ಲೋಕದ ಭೂಮಿಯನ್ನು ಕೃಷಿ ಮಾಡಿದಂತೆ ಒಮ್ಮೆ ಕನಸು ಬೀಳುತ್ತದೆ. ತಕ್ಷಣ ತಂದೆಯ ಅಪ್ಪಣೆ ಪಡೆದು ನರಕಲೋಕಕ್ಕೆ ಹೋಗಿ ದೈತ್ಯರೊಡನೆ ಹೋರಾಡಿ ಭೂಮಿ ಪಡೆಯುತ್ತಾನೆ . ಅಲ್ಲಿನ ಕಲ್ಲು ಒಡೆಯಲು ಒಡ್ಡರನ್ನು ನೇಮಿಸುತ್ತಾನೆ. ಕೃಷಿಗೆ ಜನ ಸಿಗದಿದ್ದಾಗ ಶಿವನನ್ನು ಕೇಳಲು ಕೈಲಾಸಕ್ಕೆ ಹೋಗುತ್ತಾನೆ!

ಶಿವನ ಮನೆಯಲ್ಲಿ ಶಿವಪಾರ್ವತಿ ಇಲ್ಲ. ಅಲ್ಲಿನ ಹೂ ಗಿಡಗಳು ಒಣಗಿ ನಿಂತಿದ್ದವು. ಸ್ವತಃ ಬಲಿಚಕ್ರವರ್ತಿ ಗಿಡಗಳಿಗೆ ಆರೈಕೆ ಮಾಡುತ್ತಾನೆ. ನೀರುಣಿಸುತ್ತಾನೆ, ಕೆಲವು ದಿನಗಳಲ್ಲಿ ಕೈಲಾಸದ ತೋಟದ ಗಿಡಗಳು ಚಿಗುರಿ ಹೂವುಗಳು ಅರಳುತ್ತವೆ. ಆ ಹೂವಿನ ಪರಿಮಳ ಕ್ಷೀರ ಸಾಗರದಲ್ಲಿ ತಪಸ್ಸಿಗೆ ಕುಳಿತ ಶಿವನನ್ನು ಎಚ್ಚರಿಸುತ್ತದೆ! ಒಕ್ಕಲಿಗರನ್ನು ನೀಡುತ್ತೇನೆ, ಆದರೆ ನೀನು ಇಂದು ಊಟಕ್ಕೆ ಉಳಿಯಬೇಕೆಂದು ಶಿವ ತಾಕೀತು ಮಾಡುತ್ತಾನೆ. ಪಾರ್ವತಿ ಹಸುವಿನ ಹಾಲು ಕರೆದು ತರುವಾಗ ಹಾಲು ನೆಲಕ್ಕೆ ಚೆಲ್ಲುತ್ತದೆ, ಚೆಲ್ಲಿದ ಹಾಲನ್ನು ಕಾಲಿನಿಂದ ಒರೆಸುತ್ತಾಳೆ. ಆಗ ನೆಲದಲ್ಲಿ ರುಂಡವಿಲ್ಲದ ದೇಹ ಜನಿಸುತ್ತದೆ. ಆ ದಿನ ಶಿವನದು ಅಡುಗೆ ಕೆಲಸ, ಅಕ್ಕಿ ಅಳೆಯುತ್ತ ಕುಳಿತಾಗ ದೊಡ್ಡ ಇರುವೆಗಳು ರುಂಡವೊಂದನ್ನು ಹೊತ್ತು ತರುವುದನ್ನು ಗಮನಿಸುತ್ತಾನೆ. ತಕ್ಷಣ ಈ ರುಂಡವನ್ನು ಹಾಲು ಚೆಲ್ಲಿದ ನೆಲದಲ್ಲಿ ಹುಟ್ಟಿದ ದೇಹಕ್ಕೆ ಅಂಟಿಸಿ ಜೀವದಾನ ಮಾಡುವನು. ಆಗ ಹಾಲಲ್ಲಿ ಹುಟ್ಟಿದ ಹಾಲಕ್ಕಿಗರು ನರಕ ಲೋಕದ ಭೂಮಿ ಕೃಷಿ ಮಾಡಲೆಂದು ಶಿವನಿಂದ ಸೃಷ್ಟಿಸಲ್ಪಟ್ಟವರೆಂದು ಜನಪದ ಕತೆ ಸಾರುತ್ತದೆ. ಶಿರಸಿಯ ಶೀಲಿಗರು ಹಾಲಕ್ಕಿ ಮೂಲದವರು ಎಂಬುದಕ್ಕೆ ಬೇರೆ ಆಧಾರಗಳಿಲ್ಲ, ಜನಪದ ಕತೆ ಮಾತ್ರ ಸುಳಿವು ನೀಡುತ್ತದೆ.

ಹಳ್ಳಿಗಾಡಿನ ಹಿರಿಯರ ಜತೆ ಒಡನಾಡಿ ಜನಪದ ಕತೆ, ಪುರಾಣ ಕೇಳುವ ಕುತೂಹಲವಿದ್ದರೆ ಸ್ವಾರಸ್ಯಕರ ಸಂಗತಿಗಳು ಸಾಕಷ್ಟು ದೊರೆಯುತ್ತವೆ. ಅಂತೆಕಂತೆಗಳು ಜತೆ ಸೇರಿ ಮಾಹಿತಿ ಮನರಂಜನೆ ನೀಡುತ್ತಿವೆ. ಇತಿಹಾಸದ ಸಂಗತಿಗಳು ಇಲ್ಲಿ ಐತಿಹ್ಯಗಳಾಗಿ ಉಳಿಯುತ್ತವೆ. ಒಮ್ಮೆ ಭಟ್ಕಳದ ಶಿರಾಲಿಯ ಗದ್ದೆ ಬಯಲಿನಲ್ಲಿ ಅಧ್ಯಯನ ನಡೆಸುತ್ತಿದ್ದೆವು. ಅಲ್ಲಿ ಹೇರಳ ಪ್ರಮಾಣದಲ್ಲಿ ಉಪ್ಪು ತಯಾರಿಸಲಾಗುತ್ತದೆ ಎಂದು ಫ್ರಾನ್ಸಿಸ್ ಬುಕಾನನ್ ಕ್ರಿ . ಶ 1801ರ ಫೆಬ್ರುವರಿ 19ರಲ್ಲಿ ದಾಖಲಿಸಿದ್ದರು. ಈಗ ನೋಡಿದರೆ ಎಲ್ಲೆಡೆ ಶೇಂಗಾ ಬೆಳೆದಿದ್ದರು. ಉತ್ತರ ಕನ್ನಡದಲ್ಲಿ ಗೋಕರ್ಣದ ಸಾಣಿಕಟ್ಟಾದಲ್ಲಿ ಉಪ್ಪು ತಯಾರಿಸುತ್ತಾರೆಂದು ಎಲ್ಲರೂ ಹೇಳುತ್ತಿದ್ದರು. ಶಿರಾಲಿಯಲ್ಲಿ ಎಂಭತ್ತರ ಅಜ್ಜಂದಿರಿಗೂ ಉಪ್ಪು ತಯಾರಿಸುವ ಸಂಗತಿ ತಳಿದಿರಲಿಲ್ಲ. ಸುಳಿವು ಹುಡುಕುತ್ತ ಹೊರಟಾಗ ಅಲ್ಲೊಂದು ಪುಟ್ಟ ದೇವಸ್ಥಾನ ಎದುರಾಯಿತು. ವಿವರ ಕೇಳಿದರೆ ಅದು ಕುದುರೆ ಬೀರಪ್ಪ ದೇವರು ಎಂದರು. ಹಿಂದೆ ಒಬ್ಬ ರಾಜ ಕುದುರೆಯಲ್ಲಿ ಇಲ್ಲಿಗೆ ಬರುತ್ತಿರುವಾಗ ಅವರ ಕುದುರೆ ಅಲ್ಲಿನ ಉಪ್ಪಿನ ಆಗರದಲ್ಲಿ ಹೂತು ಹೋಯಿತಂತೆ! ಕುದುರೆ ಜೀವಸಹಿತ ಎದ್ದು ಬಂದರೆ ಇಲ್ಲೊಂದು ದೇವಾಲಯ ನಿರ್ಮಿಸುವುದಾಗಿ ರಾಜ ಹರಕೆ ಹೊತ್ತನಂತೆ! ಕುದುರೆ ಎದ್ದು ಬಂದಿತು. ರಾಜ ದೇವಾಲಯ ನಿರ್ಮಿಸಿ ಅದಕ್ಕಾಗಿ ಒಂದು ಎಕರೆ ಭೂಮಿ ಉಂಬಳಿ ಬಿಟ್ಟನು. ಆ ಭೂಮಿಯಲ್ಲೀಗ ಕೃಷಿ ಮಾಡುತ್ತಿರುವವರು ಬೀರಪ್ಪನ ಕತೆ ಹೇಳಿದರು. ಇಲ್ಲಿ ಉಪ್ಪು ತಯಾರಿಕೆ ನಡೆಯುತ್ತಿತ್ತೇ? ಪ್ರಶ್ನಿಸಿದರೆ ಈಗ ಯಾರಿಗೂ ಗೊತ್ತಿರಲಿಲ್ಲ. ಬೀರಪ್ಪ ದೇವರ ಗದ್ದೆಯಲ್ಲಿ ಮಳೆಗಾಲದಲ್ಲಿ ಭತ್ತ, ಬೇಸಿಗೆಯಲ್ಲಿ ಶೇಂಗಾ ಬೆಳೆಯುತ್ತಿದ್ದರು. ಬುಕಾನನ್ ಬರೆದ ದಾಖಲೆಗೆ ಕುದುರೆ ಬೀರಪ್ಪನ ಜನಪದ ಕತೆ ಸಾಕ್ಷ್ಯ ಹೇಳಬೇಕಾಯಿತು.

ಶಿರಸಿಯ ಹುಬ್ಬಳ್ಳಿ ರಸ್ತೆಯ ಚಿಪಗಿ ಕಟ್ಟೆಗೆ ಡಿಪೋದೆದುರು ಬೇಟೆ ಬೀರಪ್ಪ ದೇವಸ್ಥಾನವಿದೆ. ಅಲ್ಲಿನ ಕೃಷಿ ಭೂಮಿಗೆ ಕಾಡುಹಂದಿ, ಜಿಂಕೆ ಮುಂತಾದ ಪ್ರಾಣಿಗಳು ದಾಳಿ ಮಾಡಿ ಬೆಳೆ ಹಾನಿ ಮಾಡುತ್ತಿದ್ದವಂತೆ. ಆಗ ಬೆಳೆ ಕಾವಲಿನ ಹೊಣೆ ಹೊತ್ತವನು ಬೀರಪ್ಪ ದೇವರು! ಬೆಳೆ ರಕ್ಷಿಸಬೇಕೆಂದು ಬೇಟೆ ಬೀರಪ್ಪನಿಗೆ ಕೃಷಿಕರು ಹರಕೆ ಹೊರುತ್ತಿದ್ದರು ಎಂಬುದು ಜನಪದ ಕತೆ. ಈಗ ನಗರ ಬೆಳೆಯುತ್ತಿದ್ದಂತೆ ಬೇಟೆ ಬೀರಪ್ಪ ಪೇಟೆ ಬೀರಪ್ಪನಾಗಿದ್ದಾನೆ! ಕೃಷಿ ಭೂಮಿಗಳಲ್ಲಿ ಮನೆಗಳು ನಿರ್ಮಾಣವಾಗಿವೆ. ಆಗ ವನ್ಯಜೀವಿಗಳಿಂದ ಬೆಳೆ ರಕ್ಷಿಸುತ್ತಿದ್ದ ದೇವರು ಪೇಟೆ ಭಕ್ತರ ಇಷ್ಟಾರ್ಥ ಪೂರೈಸಬೇಕಾಗಿದೆ. ವನ್ಯಜೀವಿಗಳ ಅಧ್ಯಯನಕ್ಕೆ ಬೇಟೆ ಬೀರಪ್ಪ ನಂಬಿಕೆ ಒಂದಿಷ್ಟು ಆಧಾರ ಒದಗಿಸುತ್ತದೆ. ಹಳ್ಳಿ ಹಳ್ಳಿಗಳಲ್ಲಿರುವ ಇಂತಹ ವಿಶೇಷಗಳ ಬಗೆಗೆ ವಿವರ ನೀಡುವ ಭಕ್ತರು ಈಗ ಕಡಿಮೆಯಾಗಿದ್ದಾರೆ.



ಉಪ್ಪಿನ ಅಂಗಣ

ನಮ್ಮ ಕಾಡಿನ ಜೀವ ವೈವಿಧ್ಯ ಕಡಿಮೆಯಾದಂತೆ ಹಳ್ಳಿಯ ದೇವವೈವಿಧ್ಯವೂ ಕಡಿಮೆಯಾದಂತೆ ಕಾಣುತ್ತಿದೆ. ಗಣಪತಿ, ಈಶ್ವರ, ಲಕ್ಷ್ಮಿ, ಶನಿ ದೇವರು, ಅಯ್ಯಪ್ಪ, ದೇವರ ಭಕ್ತಿ ಮಾರ್ಕೆಟಿಂಗ್ ಜಾಸ್ತಿಯಾಗಿದೆ. ನೆಲದ ಐತಿಹ್ಯ ಹೇಳುತ್ತಿದ್ದ ಬೀರಪ್ಪ, ಮಾಸ್ತಿ, ಜಟಕ ದೇವರ ಜನಪದ ನೆಲೆಯಲ್ಲಿ ನೆನಪುಗಳು ಮಾಸುತ್ತಿವೆ.

**—ಶಿವಾನಂದ ಕಳವೆ.**

“ಬದುಕಿನ ಭರಾಟೆಯಲ್ಲಿ ಹಲವರು ‘ಮಿಸ್’ ಮಾಡಿಕೊಂಡ ನೆಲಮೂಲ ವಿಚಾರಗಳ ಬಗೆಗಿನ ಅಂಕಣ”. ಆಕರ : ಅಡಿಕೆ ಪತ್ರಿಕೆ , ಜೂನ್ 2011.

# ಗೌರಿ ಜಿಂಕೆಯ ಆತ್ಮಕತೆ

## ಪುಸ್ತಕ ಪರಿಚಯ




"ನಾನು ಹುಟ್ಟಿ ಎರಡು ಮೂರು ದಿನ ಆಗಿರಬಹುದು. ಅಮ್ಮನ ಜತೆ ರಾತ್ರಿ ಕಬ್ಬಿನ ಗದ್ದೆಗೆ ಹೋಗಿದ್ದೆ. ಅಮ್ಮ, ಅಪ್ಪ, ಅಕ್ಕ, ಅಣ್ಣ ಹೀಗೆ ದೊಡ್ಡ ಸಂಸಾರ ನಮ್ಮದು. ಎಲ್ಲರೂ ಹುಲ್ಲು ಮೇಯುವುದರಲ್ಲಿ ತಲ್ಲೀನರಾಗಿದ್ದರು. ನಾವು ಕಾಡಿನಿಂದ ಊರಿನ ಕೃಷಿ ಭೂಮಿಗೆ ಬಂದ ಸುಳಿವು ಹೇಗೋ ನಾಯಿಗಳಿಗೆ ತಿಳಿಯಿತು. ಅವು ನಮ್ಮತ್ತ ಜೋರಾಗಿ ಓಡಿ ಬಂದ್ವು, ಜೀವ ಭಯದಿಂದ ನಮ್ಮ ಬಳಗದ ಎಲ್ಲರೂ ಚಂಗನೆ ಓಡಿ ಬಿಟ್ರು! ನನಗೆ ಈ ಧಾಳಿ ಹೊಸತು, ಏನು ಮಾಡಬೇಕು ಗೊತ್ತಾಗಲಿಲ್ಲ. ಅಮ್ಮನೂ ನನ್ನ ಬಿಟ್ಟು ಓಡಿದಳು.

ದಿಕ್ಕು ತೋಚದ ನಾನು ಭಯದಿಂದ ನಡುಗುತ್ತಾ ನಿಂತಿದ್ದೆ. ಆಗ ಈ ಅನಂತ ಗೌಡ ನಾಯಿಗಳನ್ನು ಓಡಿಸಿ ನನ್ನ ತಬ್ಬಿಕೊಂಡರು. ನಾನು ಕಂಗಾಲಾಗಿ ಚಡಪಡಿಸಿದೆ.
ನಿಮಗೆ ಗೊತ್ತು, ನಾನು ಕಾಡಲ್ಲಿ ಇರಬೇಕಿತ್ತು. ಹುಲ್ಲು, ಸೊಪ್ಪು, ಕಾಡುಹಣ್ಣು ತಿನ್ನುತ್ತಾ ಬದುಕಬೇಕು. ಹುಲಿ, ಚಿರತೆ, ಸೀಳು ನಾಯಿಗಳು ನಮ್ಮನ್ನು ಬೇಟೆಯಾಡುತ್ತವೆ. ನಮ್ಮ ನೋವು ಏನೇ ಇರ್ಲಿ, ಕಾಡು ಬದುಕು ನಮಗೆ ಚೆಂದ. ಅಮ್ಮ ಇಲ್ಲದ ನನಗೆ ಹಳ್ಳಿ ಹೊಸಮನೆಯಾಯ್ತು. ಕಳವೆ ಮನೆಯಲ್ಲಿ ಆಶ್ರಯ ಸಿಕ್ಕಿತು. ನಾನು ಊರಿಗೆ ಬಂದ ಸುದ್ದಿ ಕೇಳಿ ಪುಟಾಣಿ ಮಕ್ಕಳು ಓಡಿ ಬಂದರು, ಪಿಳಿಪಿಳಿ ಕಣ್ಣುಬಿಟ್ಟು ಅಚ್ಚರಿಯಲ್ಲಿ ನೋಡುತ್ತಿದ್ದರು. ಮನುಷ್ಯರು ಅಂದ್ರೆ ನಮಗೆ ಹುಲಿಗಿಂತ ಭಯ. ಇವರ ಸಹವಾಸ ಸಾಕು, ಎದ್ದು ಓಡಿ ಹೋಗೋಣ, ಅಮ್ಮನ ಹಾಲು ಕುಡಿಯೋಣ ಅನಿಸ್ತಿತ್ತು. ಅಳು ಬರ್ತಿತ್ತು.

"ಕಾಡಲ್ಲಿ ನಿನ್ನ ಅಮ್ಮನ ಹುಡುಕೋದು ಕಷ್ಟ ಕಣೇ... ಅಲ್ಲಿ ನಾಯಿಗಳ ಭಯ ಇದೆ. ನೀನು ಬಹಳ ಚಿಕ್ಕವಳು, ಅವು ನಿನ್ನ ಹಿಡಿದು ತಿನ್ನಬಹುದು. ಸದ್ಯಕ್ಕೆ ಇಲ್ಲೇ ಇರು, ಹಸುವಿನ ಹಾಲು ಕುಡಿದು ದೊಡ್ಡವಳಾದ್ಮೆಲೆ ಪುನ: ಕಾಡಿಗೆ ಹೋಗಬಹುದು" ಅಂದ್ರು. ಆರಾಮವಾಗಿ ಮನೆ ಮಗಳಂತೆ ಓಡಾಡ್ತಿದ್ದೆ. ಆಗ ಗಣೇಶ ಚೌತಿ ಸಮಯ, ಕಾಡುಕುಲದ ನನಗೆ 'ಗೌರಿ' ಅಂತ ಹೆಸರಿಟ್ಟರು."

ಕಬ್ಬಿನಗದ್ದೆ ನಾಯಿ ಧಾಳಿ ಘಟನೆಯ ಭಯ ನನ್ನ ಬಹಳ ಕಾಡ್ತಿತ್ತು. ನಿಮಗೂ ಗೊತ್ತು. ಅಮ್ಮನಿಂದ ದೂರವಾಗೋದಕ್ಕೆ ನಾಯಿಗಳು ಕಾರಣ, ಇವುಗಳ ಬಾಯಿಗೆ ಸಿಗದಿದ್ದು ನನ್ನ ಪುಣ್ಯ. ಒಮ್ಮೆ ಕಳವೆ ಮನೆಗೆ ನಾಯಿಮರಿ ತಂದ್ರು. ಅವು ನಾನಿದ್ದ ಮನೆಯ ಜಗಲಿಯಲ್ಲಿ ಮಲಗಿ ರಾತ್ರಿಯಿಡೀ 'ಕುಯ್ ಕುಯ್' ಎನ್ನುತ್ತಾ ಗಲಾಟೆ ಮಾಡಿದವು. ಮನೆಯ ಸಹವಾಸ ಸಾಕಪ್ಪಾ ಸಾಕು, ಸರಕ್ಕನೆ ಓಡಿ ಹಸುವಿನ ಕೊಟ್ಟಿಗೆ ಸೇರಿದೆ. ಇಲ್ಲಿ ಬಹಳ ಆರಾಮ, ಒಂದಿಷ್ಟು ಹುಲ್ಲು, ಹಾಲು ದೊರೆಯುತ್ತಿತ್ತು. ದನಕರುಗಳ ಜೊತೆ ಆಡಬಹುದಿತ್ತು. ಎಮ್ಮೆ ಕರುಗಳ ಸಲುಗೆ ಬಹಳ ಇಷ್ಟವಾಯ್ತು. ನಂಗೆ ಹೊಸ ಅಮ್ಮಂದಿರು ಸಿಕ್ಕಿದಂಗಾಯ್ತು.

ಎತ್ತು ಎಮ್ಮೆಗಳ ಜೊತೆ ಕಾಡುಗುಡ್ಡಕ್ಕೆ ಮೇಯಲು ಹೋಗ್ತಿದ್ದೆ. ಹೊಟ್ಟೆ ತುಂಬಿದ ಮೇಲೆ ಆರಾಮ ನಿದ್ದೆ. ನಿದ್ದೆ ಅಂದರೆ ಗಡದ್ದಾಗಿ ನಿಮ್ಮಂತೆ ಗೊರಕೆ ಹೊಡಿಯೋದಲ್ಲ. ಪ್ರತಿ ಕ್ಷಣವೂ ಕಣ್ತೆರೆದು.. ಕಿವಿ ಅಗಲಿಸಿ.. ಅಪಾಯಗಳ ಸಂಜ್ಞೆ ಗಮನಿಸುತ್ತಾ ಇರಬೇಕು.

ಪುಕ್ಕಟೆಯಾಗಿ ದೋಸೆ, ಅನ್ನ, ಹುಲ್ಲು ತಿನ್ನೋದು ಇಷ್ಟವಿರಲಿಲ್ಲ. ಏನಾದ್ರೂ ಕೆಲಸ ಕೊಡಿ ಅಂತ ಕಾಡಿಸ್ತಿದ್ದೆ. ಕಾಡು ಕುಲಕ್ಕೆ ಯಾರು ಕೆಲಸ ನೀಡ್ತಾರೆ? ಸುತ್ತಾಡುವ ಖುಷಿಯಲ್ಲಿ ದನಕಾಯಲು ಶುರು ಮಾಡಿದೆ. ಕಾಡಿನಲ್ಲಿ ಗುಂಪಿನಲ್ಲಿ ಓಡಾಡುವುದು ನಮ್ಮ ಕುಲಗುಣ. ದನಕಾಯೋದು ಅಂದ್ರು ಇದೇ ಅಲ್ಲವೇ? ಸೊಪ್ಪಿನ ಬೆಟ್ಟದಲ್ಲಿ ಮೇವಿಗೆ ಬಿಟ್ಟ ದನಕರು ಕಾಯ್ತಿದ್ದೆ. ಅವು ಗುಂಪು ಬಿಟ್ಟು ದೂರ ಹೋದ್ರೆ ಮೈಮೇಲೆರಗಿ ಕಟ್ಟಾಡಿ ಮರಳಿ ಗುಂಪಿಗೆ ಸೇರಿಸ್ತಿದ್ದೆ. ಎರಡು ಮೂರು ವರ್ಷ ಕೆಲಸ ಮಾಡಿದೆ.ಕಾಡಿನ ನಾನು ತಮ್ಮನ್ನು ಕಾಯುವುದು ದನಕರುಗಳಿಗೆ ಇಷ್ಟ ಇರಲಿಲ್ಲ. ನಮ್ಮ ಮಧ್ಯೆ ಆಗಾಗ ಜಗಳವಾಗುತ್ತಿತ್ತು..."

ಈಚೆಗೆ ಬಿಡುಗಡೆಗೊಂಡ 'ಗೌರಿ ಜಿಂಕೆಯ ಆತ್ಮಕತೆ' ಪುಸ್ತಕದ ಕಥಾನಾಯಕಿ ಗೌರಿಯ ಸ್ವಗತವಿದು. ಕಳವೆಯ ಮನೆಯಲ್ಲಿ ಓಡಾಡುವ ಗೌರಿಗೆ ಆ ಮನೆಯೊಂದಿಗೆ ಹದಿನೈದು ವರುಷದ ನಂಟು.

ಒಂದು ಜಿಂಕೆಯ ಮೂಲಕ ಪರಿಸರ ಸೂಕ್ಷ್ಮತೆಯ ಎಳೆಯನ್ನು ಶಿವಾನಂದ ಬಿಡಿಸಿದ್ದಾರೆ. ಪರಿಸರ ಜಾಗೃತಿಯ ದಾರಿಯಲ್ಲಿ ಇಂತಹ ಪುಸ್ತಕವೊಂದು ಹೊಸತು. 'ಗೌರಿಯ ಕತೆಯನ್ನು ಓದಿದವರು ಊರಿನ ಕಾಡು ಉಳಿಸಿ ಬೆಳೆಸಿದರೆ ಸಂತೋಷ' ಎಂಬ ಆಶಯ ವ್ಯಕ್ತಪಡಿಸುತ್ತಾರೆ ಶಿವಾನಂದ ಕಳವೆ. ಪೂರ್ತಿ ವರ್ಣಪುಟಗಳು. ಆಕರ್ಷಕ ಪುಟ ವಿನ್ಯಾಸ. ಒಂದೊಂದು ಚಿತ್ರವೂ ಗೌರಿಯ, ಪರಿಸರದ ಕತೆ ಹೇಳುತ್ತದೆ.

ಪುಸ್ತಕದ ಹೆಸರು: ಗೌರಿ ಜಿಂಕೆಯ ಆತ್ಮಕತೆ
ಲೇಖಕ : ಶಿವಾನಂದ ಕಳವೆ
ಪುಟಗಳು : 40 * ಬೆಲೆ : ರೂ. 150
ಪ್ರಕಾಶಕರು : ಸುವರ್ಣ ಸಹ್ಯಾದ್ರಿ,
ಅಂಚೆ: ಕಳವೆ, ಶಿರಸಿ ತಾಲೂಕು 581 402
ಫೋ: 94480 23715

—ನಾ. ಕಾರಂತ ಪೆರಾಜೆ

# ಇಪ್ಪತ್ತು ವರುಷ ತರಕಾರಿ ಕೃಷಿಯ ಹರುಷ

ಮಂಗಳೂರಿನ ಕದ್ರಿಪಾರ್ಕಿನಲ್ಲಿ ಅಂದು ಕೃಷಿಮೇಳ. ಸಾವಯವ ಕೃಷಿಕ ಗ್ರಾಹಕ ಬಳಗದ ಸದಸ್ಯರೊಬ್ಬರು ತಾವು ಬೆಳೆಸಿದ ತರಕಾರಿಗಳೊಂದಿಗೆ ಮುಂಜಾನೆಯೇ ಅಲ್ಲಿಗೆ ತಲಪಿದ್ದರು. ಅಲ್ಲಿ ಸಾಲುಗಟ್ಟಿ ನಿಂತಿದ್ದ ಕಾರುಗಳನ್ನು ಕಂಡು ಅವರು ಕೇಳಿದ ಪ್ರಶ್ನೆ: "ಇವರೆಲ್ಲ ಈ ಬೆ ಳಗ್ಗೆ ಕೃ ಷಿಮೇಳಕ್ಕೆ ಬಂ ದಿದ್ದಾರಾ?" ಅದಕ್ಕೆ ಬಳಗದ ಕಾರ್ಯದರ್ಶಿ ರತ್ನಾಕರ ಅವರ ಉತ್ತರ: "ಅಲ್ಲಲ್ಲ , ಅವರೆಲ್ಲ ದಿನವೂ ಇಲ್ಲಿ ವಾಕಿಂಗಿಗೆ ಬರುವವರು."



ಇದನ್ನು ಕೇಳಿದ ಆ ಸದಸ್ಯರ ಉದ್ಗಾರ:"ಓ ದೇವರೇ, ಇವರಿಗೆಲ್ಲ ಬೆಳಗ್ಗೆಬೆಳಗ್ಗೆ ವಾಕಿಂಗ್ ಮಾಡಲಿಕ್ಕೆ ಪುರುಸೊತ್ತಾ? ನಮಗೆ ಮಾತಾಡಲಿಕ್ಕೂ ಪುರುಸೊತ್ತಾಗೋದಿಲ್ಲ." ಅವರು ರಾಮಣ್ಣ ಗೌಡ (೪೦). ದಕ್ಷಿಣ ಕನ್ನಡದ ಬೆಳ್ತಂಗಡಿ ತಾಲೂಕಿನ ಉಜಿರೆಯಿಂದ ೭ ಕಿಮೀ. ದೂರದಲ್ಲಿರುವ ತನ್ನ ಅಪ್ಪರ ಜಮೀನಿನಲ್ಲಿ ಸಾವಯವ ತರಕಾರಿ ಬೇಸಾಯದಲ್ಲಿ ತೊಡಗಿರುವ ರೈತ ಅವರು. (ಮುಂಡಾಜೆ - ಸೋಮಂತಡ್ಕ ಹಾದಿಯಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಹತ್ತಿರ)

ತರಕಾರಿ ಕೃಷಿಯಲ್ಲಿ ರಾಮಣ್ಣ ಗೌಡರದು ಪಳಗಿದ ಕೈ. ಬಾಲ್ಯದಿಂದಲೇ ತರಕಾರಿ ಬೆಳೆಸುತ್ತ ಬೆಳೆದವರು ಅವರು. ಹೈಸ್ಕೂಲು ಕಲಿಯುತ್ತಿದ್ದಾಗಲೇ ತರಕಾರಿ ಕೃಷಿಯಲ್ಲಿ ತೊಡಗಿದ ಅವರಿಗೆ ಈಗ ಇದರಲ್ಲಿ ೨೦ ವರುಷಗಳ ಖಾಸಾ ಅನುಭವ. ತಂದೆಯವರೊಂದಿಗೆ ತರಕಾರಿ ಬೇಸಾಯ ಮಾಡುತ್ತಾ ಅವರು ಕಲಿತದ್ದು - ಬೀಜ ಮೊಳೆಯಿಸಿ, ಸಸಿ ಚಿಗುರಿಸಿ, ಹೂ ಅರಳಿಸಿ, ಮಿಡಿಯಾಗಿಸಿ, ತರಕಾರಿ ಬೆಳೆಸುವ ವಿಸ್ಮಯದ ಗುಟ್ಟುಗಳನ್ನು.

ರಾಮಣ್ಣ ಗೌಡರು ತಾವು ಬೆಳೆದ ತರಕಾರಿಗಳನ್ನು ಮಂಗಳೂರಿನ ಸಾವಯವ ಸಂತೆಗೆ ತರಲಿಕ್ಕಾಗಿ ಒಮ್ನಿ ಕಾರಿಗೆ ತುಂಬುವುದೇ ಒಂದು ಸಾಹಸ. ಅವರು ತಮ್ಮ ಒಮ್ನಿ ಕಾರನ್ನು ಜಮೀನಿಗೆ ಒಯ್ಯುವಂತಿಲ್ಲ. ಯಾಕೆಂದರೆ ಮುಖ್ಯ ರಸ್ತೆಯಿಂದ ಅವರ ಜಮೀನಿಗೆ ಸಾಗುವ ಹಾದಿ, ಕಾರು ಮಗುಚಿ ಬೀಳಬಹುದಾದ ತಿರುವುಗಳಿರುವ ಹಾದಿ. ಹಾಗಾಗಿ, ತಾವು ಬೆಳೆಸಿದ ಬಸಳೆ, ಬದನೆ, ಕುಂಬಳಕಾಯಿ, ತೊಂಡೆಕಾಯಿ, ಸೋರೆಕಾಯಿ, ಪಪ್ಪಾಯಿ ಇವನ್ನೆಲ್ಲ ಅರ್ಧ ಕಿಮೀ. ದೂರ ಹೊತ್ತು ತಂದು ಒಮ್ನಿ ಕಾರಿಗೆ ತುಂಬುತ್ತಾರೆ.

ನಮ್ಮ ಬಳಗವು ಪ್ರತಿ ತಿಂಗಳೂ ಮೂರು ಭಾನುವಾರಗಳಲ್ಲಿ ಜರಗಿಸುವ ಸಾವಯವ ಸಂತೆಗೆ ರಾಮಣ್ಣ ಬೆಳಗ್ಗೆ ಏಳೂವರೆ ಗಂಟೆಗೇ ಹಾಜರ್. ಮೇ ೨೦೧೪ರಲ್ಲಿ ನಮ್ಮ ಬಳಗ ಈ ಸಂತೆ ಆರಂಭಿಸಿದಾಗಿನಿಂದಲೂ ಮುಂಜಾನೆ ಬರುವ ಗ್ರಾಹಕರಿಗೆ ಅವರು ಯಾವತ್ತೂ ನಿರಾಸೆ ಮಾಡಿಲ್ಲ. ಅವರ ಬಹುಪಾಲು ತರಕಾರಿಗಳು ಒಂದು ಗಂಟೆಯಲ್ಲೇ ಮಾರಾಟ. ಆರಂಭದಿಂದಲೂ ಪ್ರತಿಯೊಂದು ಸಂತೆಗೂ ಮಾರಾಟಕ್ಕಾಗಿ ತರಕಾರಿ ತಂದಿರುವ ರಾಮಣ್ಣ ಗೌಡರ ಜಮೀನಿಗೆ ಇತ್ತೀಚೆಗೆ ನಮ್ಮ ಬಳಗದ ಸದಸ್ಯರ ಮರುಭೇಟಿ.

ಆಗ, "ರಾಮಣ್ಣ , ಸೋರೆ ಕಾಯಿ ಬೇಕಾಗಿತ್ತು" ಎಂದು ಕೇಳಿದವರನ್ನೆಲ್ಲ ಜಮೀನಿಗೆ ಕರೆದೊಯ್ದು, ತಾಜಾ ಸೋರೆಕಾಯಿ ಕೊಯ್ದು ಕೊಟ್ಟರು. "ಶುಂಠಿ ಬೇಕಾಗಿತ್ತು" ಎಂದವರಿಗೆ ಲ್ಲ, ಗೋಣಿಯಿಂದ ತಾಜಾ ಶುಂಠಿ ಮೊಗೆದುಮೊಗೆದು ಕೊಟ್ಟರು.

ಪಶ್ಚಿಮಘಟ್ಟದ ಬುಡದಲ್ಲಿರುವ ಅವರ ಜಮೀನಿನ ಪಕ್ಕದಲ್ಲಿದೆ ದಟ್ಟ ಕಾಡು. ಅಲ್ಲಿಂದ ನುಗ್ಗಿ ಬರುವ ಕಾಡುಹಂದಿಗಳ ಕಾಟ. ಅದನ್ನು ತಡೆಯಲಿಕ್ಕಾಗಿ ತರಕಾರಿ ಹೊಲದ ಸುತ್ತಲೂ ವಿದ್ಯುತ್ ಬೇಲಿ ಹಾಕಿ, ನೈಲಾನ್ ಹಗ್ಗದ ಬಲೆ ಕಟ್ಟಿದ್ದಾರೆ. ಆದರೂ ಒಳನುಗ್ಗಿ ಬರುವ ಕಾಡುಹಂದಿಗಳು ಒಂದಷ್ಟು ತರಕಾರಿ ಹಾಳು ಮಾಡಿಯೇ ಮಾಡುತ್ತವೆ.



ಅಂದೊಮ್ಮೆ ರಾಮಣ್ಣ ಗೌಡರಿಂದ ನಮ್ಮ ಬಳಗದ ಕಾರ್ಯದರ್ಶಿಯವರಿಗೆ ಮುಂಜಾನೆ ಫೋನ್ ಕರೆ ಬಂತು, "ನನ್ನ ಒಮ್ನಿ ಮಗುಚಿ ಬಿದ್ದಿದೆ. ನನಗೇನೂ ಏನಾಗಿಲ್ಲ." ತಾಜಾ ತರಕಾರಿ ಕೇಳಿಕೊಂಡು ಬರುವ ಗ್ರಾಹಕರಿಗೆ ಏನು ಉತ್ತರ ಹೇಳುವುದೆಂಬ ಚಿಂತೆ ನಮಗೆ. ಆದರೆ, ಬೆಳಗ್ಗೆ ಎಂಟು ಗಂಟೆಗೆ ಬೇರೊಂದು ವಾಹನದಲ್ಲಿ ತರಕಾರಿ ಸಹಿತ ರಾಮಣ್ಣ ಹಾಜರ್! ಅದು ಅವರ ಬದ್ಧತೆ. ರಾಮಣ್ಣ ಗೌಡರ ತರಕಾರಿಗೆ ಹತ್ತಿರದ ಉಜಿರೆಯಲ್ಲೂ



ಬೇಡಿಕೆಯಿದೆ. ಒಂದೂವರೆ ಗಂಟೆ ಕಾರ್ ಓಡಿಸುತ್ತಾ, ತರಕಾರಿ ಮಾರಾಟಕ್ಕಾಗಿ ಅವರು ದೂರದ ಮಂಗಳೂರಿಗೆ ಬರಬೇಕಾಗಿಲ್ಲ. ಹಲವು ರೈತರು ರಾಸಾಯನಿಕ ಗೊಬ್ಬರ ಮತ್ತು ಪೀಡೆನಾಶಕಗಳನ್ನು ಸುರಿದು ವಿಷಭರಿತ ತರಕಾರಿ ಬೆಳೆಸಿ, ಅಮಾಯಕ ಗ್ರಾಹಕರಿಗೆ ಮಾರಿ ಲಾಭ ಗಳಿಸುತ್ತಿರುವುದು ಅವರಿಗೂ ಗೊತ್ತು. ಆದರೆ, ರಾಮಣ್ಣ ಗೌಡ ಸಾವಯವ ಬೇಸಾಯ ಬಿಡಲು ತಯಾರಿಲ್ಲ. ಅದೂ ಅವರ ಬದ್ಧತೆ.

ಮಂಗಳೂರಿನ ಸಾವಯವ ಕೃಷಿಕ ಗ್ರಾಹಕ ಬಳಗವು ಮೂರನೆಯ ವರುಷಕ್ಕೆ ಕಾಲಿಟ್ಟಿರುವ ಈ ಹೊತ್ತಿನಲ್ಲಿ ರಾಮಣ್ಣ ಗೌಡರಂತಹ ತೆರೆಯ ಮರೆಯ ರೈತರ ಕೊಡುಗೆಯನ್ನು ದಾಖಲಿಸಬೇಕಾಗುತ್ತದೆ. ಕಾಡಿನ ಪಕ್ಕದ ಪುಟ್ಟ ಮನೆಯಲ್ಲಿ ಪತ್ನಿ ಭವ್ಯ ಮತ್ತು ಪುಟ್ಟ ಮಕ್ಕಳಿಬ್ಬರೊಂದಿಗೆ ನೆಲೆಸಿರುವ ರಾಮಣ್ಣ ಗೌಡರಿಗೆ ಯಾವಾಗಲೂ ಒಂದೇ ಚಿಂತೆ: ಮುಂದಿನ ತಿಂಗಳ ಸಂತೆಗಳಿಗೆ ಯಾವ್ಯಾವ ತರಕಾರಿ ಬೆಳೆಯಬೇಕು ?

"ನಿಮ್ಮ ತರಕಾರಿ ಬೆಂಗಳೂರಿನಲ್ಲಿ ಮಾರಬಹುದಲ್ಲಾ, ಅಲ್ಲಿ ಒಳ್ಳೇ ಲಾಭ ಬರುತ್ತದೆ" ಎಂದೊಬ್ಬರು ಸಲಹೆಯಿತ್ತಾಗ ರಾಮಣ್ಣ ಗೌಡರ ಮುಗುಳ್ನಗುವಿನ ಪ್ರತಿಕ್ರಿಯೆ: "ನನಗೆ ಮಂಗಳೂರಿನ ಈ ಸಂತೆಯಲ್ಲಿ ಸಿಗುವ ಲಾಭವೇ ಸಾಕು. ಇಲ್ಲಿ ನನ್ನಿಂದ ತರಕಾರಿ ತಗೊಳ್ಳುವವರೆಲ್ಲ ನನಗಾಗಿ ವಾರವಿಡೀ ಕಾಯುತ್ತಾರೆ. ಅವರಿಗೆ ನಾನು ಬೆಳೆಸಿದ ತರಕಾರಿ ಕೊಡುವಾಗ ಸಿಗುವ ಸಂತೋಷವಿದೆಯಲ್ಲ, ಅದು ಬೇರೆ ಎಲ್ಲಿ ತರಕಾರಿ ಮಾರಿದರೂ ಸಿಗಲಿಕ್ಕಿಲ್ಲ."

—ಅಡ್ಡೂರು ಕೃಷ್ಣ ರಾವ್

# ಕೊತ್ತಂಬರಿ

**ಸಸ್ಯ ಶಾಸ್ತ್ರೀಯ ಹೆಸರು :** ಕೊರಿಯಾಂಡರ್ ಸಟೈವಂ

**ಸಂಸ್ಕೃತ :** ಧಾನ್ಯಕಮ್

**ಇಂಗ್ಲಿಷ್ :** ಕೋರಿಯಾಂಡರ್

ಭಾರತೀಯರ ಮನೆಯ ಅಡುಗೆಯು ಕೊತ್ತಂಬರಿ ಸೊಪ್ಪು ಮತ್ತು ಬೀಜ (ಧನಿಯಾ) ಇಲ್ಲದೆ ಅಪೂರ್ಣ. ಕೊತ್ತಂಬರಿ ಸೊಪ್ಪನ್ನು ಹಸಿಯಾಗಿ ತಿನ್ನಬಹುದು ಮತ್ತು ಸಾರು , ಸಾಂಬಾರು , ಪಲ್ಯ ಇವಕ್ಕೆಲ್ಲ ಹಾಕುತ್ತಾರೆ. ಇದರಿಂದ ಅವುಗಳಲ್ಲಿ ಕೊತ್ತಂಬರಿಯ ಪರಿಮಳ ಘಮಘಮಿಸುತ್ತವೆ. ಇದರಲ್ಲಿ ವಿಟಮಿನ್ ‘ಸಿ’ ಮತ್ತು ವಿಟಮಿನ್ ‘ಎ’ ಇರು ತ್ತದೆ. ಕೊತ್ತಂಬರಿ ಬೀಜವನ್ನು ಧನಿಯಾ ಅಥವಾ ಹವೀಜ ಎಂದೂ ಕರೆಯುತ್ತಾರೆ. ಕೊತ್ತಂಬರಿ ಸೊಪ್ಪಿನ ಚಟ್ನಿ, ಸಂಡಿಗೆ, ವಡೆ, ಹಪ್ಪಳ ... ಇತ್ಯಾದಿ ಖಾದ್ಯಗಳು ಬಲು ರುಚಿ.

ಹಚ್ಚ ಹಸಿರು ಗಿಡಗಳು ಅತಿ ಚಿಕ್ಕವು . ಬಿಳಿ ಬಣ್ಣದ ಹೂ ಗಳನ್ನು ಬಿಡುತ್ತವೆ . ಕಾಂಡವು ನುಣುಪಾಗಿದ್ದು ಅನೇಕ ಕವಲುಗಳು ಇರುತ್ತವೆ.

**ಔಷಧೀಯ ಬಳಕೆಗಳು :**

1) **ಬಾಯಿಹುಣ್ಣು :** ಬಾಯಿಹುಣ್ಣಿನ ಶಮನಕ್ಕೆ ಕೊತ್ತಂಬರಿ ಸೊಪ್ಪಿನ ರಸದಿಂದ ಬಾಯಿ ಮುಕ್ಕಳಿಸಬೇಕು. ಅಥವಾ ಊಟದ ನಂತರ ಎಲೆಗಳನ್ನು ತಿನ್ನಬೇಕು.

2) **ಅಜೀರ್ಣದಿಂ ವಾಂತಿ :** ಈ ಸಮಸ್ಯೆಯ ಪರಿಹಾರಕ್ಕೆ ಒಂದು ಲೋಟ ಮಜ್ಜಿಗೆಗೆ ಎರಡು ಚಮಚೆ ಕೊತ್ತಂಬರಿ ಸೊಪ್ಪಿನ ತಾಜಾ ರಸ ಸೇರಿಸಿ ದಿನಕ್ಕೆರಡುಬಾರಿ ಸೇವನೆ ಮಾಡಬೇಕು.

3) **ತಲೆಸುತ್ತು :** ದಿನಕ್ಕೆರಡುಬಾರಿ ಕೊತ್ತಂಬರಿ ಸೊಪ್ಪಿನ ರಸದೊಂದಿಗೆ ಕಲ್ಲುಸಕ್ಕರೆ ಬೆರೆಸಿ ಕುಡಿಯುವುದು ಈ ಸಮಸ್ಯೆಯ ಪರಿಹಾರಕ್ಕೆ ಸಹಕಾರಿ.

4) **ಹೊಟ್ಟೆಯುಬ್ಬರ :** ಊಟದ ನಂತರ ಒಂದು ಲೋಟ ಮಜ್ಜಿಗೆಗೆ ಕೊತ್ತಂಬರಿ ಸೊಪ್ಪು ಇಲ್ಲವೇ ಸೊಪ್ಪಿನ ರಸವನ್ನು ಸೇರಿಸಿ ಬೆರೆಸಿ ಕುಡಿಯುವುದು ಪಚನ ಕ್ರಿಯೆಗೆ ಸಹಕಾರಿ.

5) ರಕ್ತಹೀನತೆ : ಕೊತ್ತಂಬರಿ ಸೊಪ್ಪಿನಲ್ಲಿ ಅಧಿಕ ಕಬ್ಬಿಣಾಂಶ ಇದೆ . ಆದ್ದರಿಂದ ರಕ್ತ ಹೀನತೆಗೆ ಔಷಧಿಯಾಗಿ ಇದನ್ನು ಸೇವಿಸಬಹುದು. ಮೂರು ಚಮಚೆ ಕೊತ್ತಂಬರಿ ಸೊಪ್ಪಿನ ರಸವನ್ನು ಜೇನಿನೊಂದಿಗೆ ಬೆರೆಸಿ ಪ್ರತಿದಿನ ಬೆಳಿಗ್ಗೆ ಖಾಲಿಹೊಟ್ಟೆಗೆ ಕುಡಿಯಬೇಕು.



ಔಷಧೀಯ ಬಳಕೆಗಳು (ವಿವಿಧ ಆಕರಗಳಿಂದ)

—ಚೈತ್ರಿ ಕ.ಯು . ಭಟ್

## ಮೊಬೈಲಿನಲ್ಲಿ ಸಂಪದ

**ಆಯುರ್ವಿಕಿ ಆಪ್ ಅತೀ ಶೀಘ್ರದಲ್ಲಿ ನಿಮ್ಮ ಆಂಡ್ರಾಯ್ಡ್ ಮತ್ತು ಐಫೋನ್ ನಲ್ಲಿ.**

# ಹಲಸು ಹಬ್ಬ: ಹಲಸು ಭವಿಷ್ಯದ ಬೆಳೆ ಆಗಬೇಕಾದರೆ....



ಕರಾವಳಿ ಕರ್ನಾಟಕದ ಹಾಗೂ ಮಲೆನಾಡಿನ ಹಲವು ಹಳ್ಳಿಗಳಲ್ಲಿ ಮಳೆಗಾಲ ಆರಂಭವಾಗುತ್ತಿದ್ದಂತೆಯೇ ನೀವು ಕಾಣ ಬಹುದಾದ ಒಂದು ದೃಶ್ಯ: ಹಲಸಿನ ಮರಗಳಿಂದ ಬಿದ್ದು ಕೊಳೆಯುವ ರಾಶಿರಾಶಿ ಹಲಸಿನ ಹಣ್ಣುಗಳು. ಕರ್ನಾಟಕದಲ್ಲಿ ಪ್ರತಿ ವರುಷ ಕನಿಷ್ಠ ೨,೦೦೦ ಕೋಟಿ ರೂಪಾಯಿಯ ಹಲಸು ಹಾಳಾಗುತ್ತಿದೆ ಎಂದು ಅಂದಾಜು.



ಎಂತಹ ಸಂಪನ್ಮೂಲಕ್ಕೆ ಎಂತಹ ದುರವಸ್ಥೆ! ಹೀಗೆ ಹಲಸು ಹಾಳಾಗಲು ನಮ್ಮ ಅಲಕ್ಷ್ಯವೇ ಕಾರಣವಲ್ಲವೇ?

ಈ ಹಿನ್ನೆಲೆಯಲ್ಲಿ, ಹಲಸಿನ ಬಗೆಬಗೆ ಬಳಕೆಯ ಬಗ್ಗೆ ಜಾಗೃತಿ ಮೂಡಿಸಲಿಕ್ಕಾಗಿ ಸಂಘಟಿಸಲಾಗುತ್ತಿರುವ “ಹಲಸು ಹಬ್ಬ”ಗಳು ಮುಖ್ಯವಾಗುತ್ತವೆ. ಇತ್ತೀಚೆಗಿನ “ಹಲಸು ಹಬ್ಬ” ಆಯೋಜಿಸಿದ್ದು ನಮ್ಮ ಸಾವಯವ ಕೃಷಿಕ ಗ್ರಾಹಕ ಬಳಗ – ಮಂಗಳೂರಿನ ಬಾಳಂಭಟ್ ಸಭಾಂಗಣದಲ್ಲಿ, ೧೧ ಜೂನ್ ೨೦೧೭ರಂದು.



ಈ “ಹಲಸು ಹಬ್ಬ” ಉದ್ಘಾಟಿಸಿದವರು ಕೇರಳ ಸರಕಾರದಿಂದ “ಅಂತರರಾಷ್ಟ್ರೀಯ ಹಲಸು ರಾಯಭಾರಿ” ಎಂದು ಗೌರವಿಸಲ್ಪಟ್ಟ ಶ್ರೀಪಡ್ರೆ ಅವರು. “ಅಡಿಕೆ ಪತ್ರಿಕೆ”ಯ ಕಾರ್ಯನಿರ್ವಾಹಕ ಸಂಪಾ ದಕರೂ ಆಗಿರುವ ಅವರು, ತಮ್ಮ ಉದ್ಘಾಟನಾ ಭಾಷಣದಲ್ಲಿ ಹೇಳಿದ ಒಂದು ಮಾತು, “ನಮ್ಮ ಜನರಿಗೆ ಕಳೆದ ಮೂರ್ನಾಲ್ಕು ವರುಷಗಳಲ್ಲಿ ಸಿರಿಧಾನ್ಯಗಳ ಮೋಹ ಹಿಡಿಸಿದಂತೆ ಹಲಸಿನ ಮೋಹ ಹಿಡಿಸಬೇಕು.” ಈ ಮಾತಿನ ಮರ್ಮ ಗ್ರಹಿಸಿದರೋ ಎಂಬಂತೆ ಅಂದಿನ ಹಲಸು ಹಬ್ಬದಲ್ಲಿ ಕೆಲವರು ತಮ್ಮ ವಿನೂತನ ಹಲಸು ತಿನಿಸುಗಳ ಮೂಲಕ ಜನಮನ ಗೆದ್ದರು. ಅವರಲ್ಲೊಬ್ಬರು ದಕ್ಷಿಣಕನ್ನಡದ ಪುತ್ತೂರಿನ ಹತ್ತಿರದ ಮರಿಕೆಯ ಸುಹಾಸ್. ಅವರು ಅಲ್ಲಿ ತಯಾರಿಸಿ ಕೊಡುತ್ತಿದ್ದ ಹಲಸಿನ ಚಾಟ್ಗೆ ಭಾರೀ ಬೇಡಿಕೆ. ಅವರ ಮಳಿಗೆಯಲ್ಲಿ ಮಾರಾಟಕ್ಕಿದ್ದ ಇತರ ವಿಶೇಷ ತಿನಿಸುಗಳು: ಹಲಸಿನ ಪಲಾವ್, ಬನ್ಸ್, ಬರ್ಫಿ ಹಾಗೂ ಪರೋಟ.

ಕೇರಳದ ಕೋಳಿಯೂರಿನ ರವಿಶಂಕರ್ ಮತ್ತು ತಂಡದವರು ಗ್ರಾಹಕರಿಗೆ ನೀಡುತ್ತಿದ್ದದ್ದು ಅಲ್ಲೇ ತಯಾರಿಸಿದ ಹಲಸಿನ ಬಿಸಿಬಿಸಿ ದೋಸೆ, ಬಜ್ಜಿ ಮತ್ತು ಎಣ್ಣೆಯಲ್ಲಿ ಕರಿದ ಹಲಸಿನ ಹಪ್ಪಳ. ಅವರಿಗೆ ಅಂದು ಸಂಜೆಯ ವರೆಗೆ ಬಿಡುವಿಲ್ಲದ ವ್ಯಾಪಾರ. ಅಲ್ಲಿ ಶರವು ಕ್ಯಾಟರರ್ಸ್ ಮಳಿಗೆಯ ಎದುರು ಮುಗಿಯದ ಸರತಿ ಸಾಲು – ಹಲಸಿನ ಕಬಾಬ್, ಮಂಚೂರಿ, ಚಿಲ್ಲಿ, ಘೀರೋಸ್ಟ್, ಪಲಾವ್, ಬನ್ಸ್, ಅಂಬಡೆ ಮತ್ತು ದೋಸೆಗಳ ಖರೀದಿಗೆ. ಮುಳಿಯ ವೆಂಕಟಕೃಷ್ಣ ಶರ್ಮರು ತಂದಿದ್ದ ಹಲಸಿನ ಹಪ್ಪಳ ಮಾರಾಟವೂ ಬಿರುಸು. ಮೈತ್ರೇಯಿ ಶೆಣೈ ಹಲಸಿನ ಬೀಜದ ಹುಡಿಯಿಂದ ತಯಾರಿಸಿದ ಪಾನೀಯ “ಜಾಫಿ”ಗೆ ನಿರಂತರ ಬೇಡಿಕೆ.

“ಹಲಸಿನ ಉತ್ಪನ್ನಗಳಿಗೆ ಭಾರೀ ಬೇಡಿಕೆಯಿದೆ. ಆದರೆ ಪೂರೈಕೆ ಸಾಕಾಗುತ್ತಿಲ್ಲ. ಪೂರೈಕೆ ಹೆಚ್ಚಬೇಕಾದರೆ ಯಾಂತ್ರೀಕೃತ ಉತ್ಪಾದನೆ ಅತ್ಯಗತ್ಯ” ಎಂದು ತಮ್ಮ ಮಾತಿನಲ್ಲಿ ಸ್ಪಷ್ಟ ಪಡಿಸಿದರು ಶ್ರೀಪಡ್ರೆ. ಈ ನಿಟ್ಟಿನಲ್ಲಿ ಉಲ್ಲೇಖಾರ್ಹ ಸಾಧನೆ ಮಾಡಿದವರಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ ತಾಲೂಕಿನ ಆಡುವಳ್ಳಿಯ ಎಸ್.ಆರ್.ಎಸ್. ಹೋಂ ಇಂಡಸ್ಟ್ರೀಸಿನ ಕೆ.ಎಸ್. ಶಿವಶಂಕರ್ ೧೫ ವರುಷದ ಪ್ರಯತ್ನದಿಂದ ಹಲಸು ಹಪ್ಪಳ ತಯಾರಿ ಯಂತ್ರ ಅಭಿವೃದ್ಧಿ ಪಡಿಸಿ, ಜುಲಾಯಿ ೨೦೧೫ರಿಂದ ಅದರಿಂದಲೇ ಹಲಸಿನ ಹಪ್ಪಳ ಉತ್ಪಾದಿಸುತ್ತಿರುವುದು ಸಾಧನೆಯೇ ಸೈ. ಉಡುಪಿ ಜಿಲ್ಲೆಯ ಕುಂದಾಪುರ ಹತ್ತಿರದಲ್ಲಿ ಕಿಶೋರ್ ಕೊಡ್ಗಿ ಅವರ “ಗೋಕುಲ್ ಫ್ರುಟ್ಸ್” ಕಳೆದ ಹತ್ತು ವರುಷಗಳಿಂದ ಹಲಸಿನ ಹಣ್ಣಿನ ವ್ಯಾಕ್ಯೂಮ್ ಫ್ರೈ ಚಿಪ್ಸ್ ಉತ್ಪಾದಿಸಿ ಮಾರಾಟ ಮಾಡುತ್ತಿದೆ. ಇದು ದೇಶದಲ್ಲೇ ಮೊತ್ತಮೊದಲ ಇಂತಹ ಉದ್ಯಮ. ದೇಶಾದ್ಯಂತ ನೂರಕ್ಕೂ ಅಧಿಕ “ನ್ಯಾಚುರಲ್ ಐಸ್ ಕ್ರೀಮ್” ಮಳಿಗೆಗಳಲ್ಲಿ ಹಲಸಿನ ಐಸ್ ಕ್ರೀಮನ್ನು



ಯಶಸ್ವಿಯಾಗಿ ಮಾರಾಟ ಮಾಡುತ್ತಿರುವುದು ಇದರ ರೂವಾರಿ ಆರ್.ಎಸ್. ಕಾಮತರ ಸಾಹಸ.

ಹಲಸಿನ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಿಸಲಿಕ್ಕಾಗಿ ಶ್ರೀಪಡ್ರೆಯವರು ಸೂಚಿಸಿದ್ದು ಎರಡು ದಾರಿಗಳನ್ನು: ಮೊದಲನೆಯದು, ಉತ್ತರ ಭಾರತದಲ್ಲಿ ಹಲಸಿನ ಹಣ್ಣಿಗೆ ಬೇಡಿಕೆ ಮೂಡಿಸುವುದು. ಈಗ ಅಲ್ಲಿ ತರಕಾರಿಯಾಗಿ ಹಲಸಿನ ಕಾಯಿಗೆ ಬೇಡಿಕೆ ಚೆನ್ನಾಗಿದೆ. ಆದರೆ ಹಲಸಿನ ಹಣ್ಣಿನ ಬಳಕೆ ಅಲ್ಲಿ ಬಹಳ ಕಡಿಮೆ. ಎರಡನೆಯದಾಗಿ, ಹಲಸಿನ ಕಾಯಿಯ ಸೊಳೆಯ ಗ್ಲೈಸೆಮಿಕ್ಸ್ ಇಂಡೆಕ್ಸ್ ಕಡಿಮೆ ಇರುವ ಕಾರಣ ಅದು ಸಕ್ಕರೆ ಕಾಯಿಲೆಯವರಿಗೆ ಸೂಕ್ತ ಆಹಾರ ಎಂಬುದಕ್ಕೆ (ಇದು ಅಧ್ಯಯನಗಳಿಂದ ದೃಢಪಟ್ಟಿರುವ ವಿಷಯ) ವ್ಯಾಪಕ ಪ್ರಚಾರ ನೀಡುವುದು. ಹೆಚ್ಚೆಚ್ಚು ಮಧುಮೇಹಿಗಳು ತರಕಾರಿಯಾಗಿ ಹಸಿಹಲಸು ತಿನ್ನತೊಡಗಿದರೆ, ಅದಕ್ಕೆ ಬೇಡಿಕೆ ಖಂಡಿತ ಹೆಚ್ಚಲಿದೆ.





ಈಗ ದಕ್ಷಿಣ ಭಾರತದಲ್ಲಿ ಹಬ್ಬುತ್ತಿರುವ ಹಲಸು ಜಾಗೃತಿ ಆಂದೋಲನವು ಸ್ಥಳೀಯ ಉತ್ತಮ ತಳಿಗಳ ಆಯ್ಕೆ ಹಾಗೂ ಕೃಷಿಯಿಂದ ಶುರು ಮಾಡಿ, ಮುನ್ನಡೆದರೆ ಭಾರತ ಹಲಸಿನ ಕೃಷಿ ಮತ್ತು ಉದ್ದಿಮೆ ಎರಡರಲ್ಲೂ ಮುಂಚೂಣಿಗೆ ಬರಲು ಸಾಧ್ಯವಿದೆ. ವಿಯೆಟ್ನಾಮಿನ ಉದಾಹರಣೆ ನಮ್ಮ ಕಣ್ಣ ಮುಂದಿದೆ. ಕೇವಲ ಒಂದೂವರೆ ದಶಕದಲ್ಲಿ ಅಲ್ಲಿ ಹಲಸು ಪ್ಲಾಂಟೇಷನ್ ೫೦,೦೦೦ ಹೆಕ್ಟೇರಿಗೆ ವ್ಯಾಪಿಸಿದೆ. ಅಲ್ಲಿ ಬೆಳೆಯುವ ಹಲಸಿನ ಶೇಕಡಾ ೭೦ರಷ್ಟು ಉದ್ದಿಮೆಗೆ ಬಳಕೆ ಆಗುತ್ತದೆ. ವಿಯೆಟ್ನಾಮಿನ ಮುಖ್ಯ ಹಲಸಿನ ಉತ್ಪನ್ನ ಬಕ್ಕೆ ಹಣ್ಣಿನ ವ್ಯಾಕ್ಯೂಮ್ ಫ್ರೈ ಚಿಪ್ಸ್. ಇದರ ಉತ್ಪಾದನೆಗೆ ಸ್ವಯಂಚಾಲಿತ ಯಂತ್ರಗಳು ಹಾಗೂ ತೀರಾ ಕಡಿಮೆ ಎಣ್ಣೆಯ ಬಳಕೆ.

ಈಗ ಇದರ ಉತ್ಪಾದನೆಯಲ್ಲಿ ಜಗತ್ತಿನಲ್ಲೇ ಮೊದಲ



ಸ್ಥಾನದಲ್ಲಿದೆ ಅಲ್ಲಿನ ವಿನಾಮಿಟ್ ಕಂಪೆನಿ. ಹಲವು ದೇಶಗಳಿಗೆ ಇದನ್ನು ರಫ್ತು ಮಾಡುತ್ತಿರುವ ಈ ದೈತ್ಯ ಕಂಪೆನಿಯ ಹಲಸಿನ ತೋಟದ ವಿಸ್ತೀರ್ಣ ೧೦,೦೦೦ ಹೆಕ್ಟೇರ್. ವಿಯೆಟ್ನಾಮಿನಲ್ಲಿ ಹಲಸು ಉದ್ದಿಮೆ ಬೃಹತ್ತಾಗಿ ಬೆಳೆಯಲು ಪ್ರಧಾನ ಕಾರಣಗಳು: ಏಕಬೆಳೆಯಾಗಿ ವಿಸ್ತಾರ ತೋಟಗಳಲ್ಲಿ ಹಲಸಿನ ಕೃಷಿ ಹಾಗೂ ಪೂರ್ವಸಂಸ್ಕರಣಾ ಕೇಂದ್ರಗಳು (ಪ್ರಿ ಪ್ರೊಸೆಸಿಂಗ್ ಸೆಂಟರ್ಸ್). ಈಗ ಕೇರಳದಲ್ಲಿ ಎರಡು ಹಲಸು ಉದ್ಯಮ ಘಟಕಗಳು ಇಂತಹ ಕೇಂದ್ರಗಳನ್ನು ತೆರೆದಿರುವುದು ಆಶಾದಾಯಕ ಬೆಳವಣಿಗೆ.

ಹಲಸು ಭವಿಷ್ಯದ ಬೆಳೆ ಆಗಬೇಕಾದರೆ, ಹಲಸಿನ ಕೃಷಿ ಬಗ್ಗೆ ಕೃಷಿಕರು ತಮ್ಮ ಧೋರಣೆಯನ್ನೇ ಬದಲಾಯಿಸಬೇಕಾಗಿದೆ. ಹಲಸಿನ ಗಿಡ ನೆಟ್ಟರಾಯಿತು, ಅದರ ಪಾಡಿಗೆ ಅದು ಬೆಳೆಯುತ್ತದೆ ಎಂಬ ಧೋರಣೆ ಸಲ್ಲದು. ಅದನ್ನು ಕಾಫಿ ಪ್ಲಾಂಟೇಷನುಗಳಂತೆ ವೈಜ್ಞಾನಿಕವಾಗಿ ಬೆಳೆಸಬೇಕಾಗಿದೆ. ಹಲಸಿನ ಮರಗಳು ೧೫ ಅಡಿಗಳಿಗಿಂತ ಹೆಚ್ಚು ಎತ್ತರಕ್ಕೆ ಬೆಳೆಯಲು ಬಿಡಲೇ ಬಾರದು. ಹಲಸಿನ ಗಿಡಗಳ ಪ್ರೂನಿಂಗ್ (ವರುಷಕ್ಕೆ ಎರಡು ಸಲ) ಕಡ್ಡಾಯ. ಹಲಸಿನ ಕಾಯಿಗಳ ಥಿನ್ನಿಂಗ್ ಕೂಡ ಅತ್ಯಗತ್ಯ.

ಹಲಸಿನ ಉತ್ಪನ್ನಗಳ ಉತ್ಪಾದಕರೂ ತಮ್ಮ ಧೋರಣೆ ಬದಲಾಯಿಸಬೇಕಾಗಿದೆ. ಉತ್ಪನ್ನ ಹೇಗಿದ್ದರೂ ಮಾರಾಟವಾಗುತ್ತದೆ ಎಂಬ ಧೋರಣೆ ಸಲ್ಲದು. ಗುಣಮಟ್ಟ ಸುಧಾರಣೆ ಮತ್ತು ಆಕರ್ಷಕ ಪ್ಯಾಕೇಜಿಂಗ್ ಇಂದಿನ ತುರ್ತು. ಚುಟುಕಾಗಿ ಹೇಳಬೇಕೆಂದರೆ, ಹಲಸಿನ ಉತ್ಪನ್ನಗಳು ಮಾರುಕಟ್ಟೆಯಲ್ಲಿರುವ ಇತರ ಅತ್ಯುತ್ತಮ ಬ್ರಾಂಡಿನ ಆಹಾರ ಉತ್ಪನ್ನಗಳಿಗೆ ಸ್ಪರ್ಧೆ ನೀಡುವಂತಿರಬೇಕು. ಇವನ್ನೆಲ್ಲ ಸಾಧಿಸಿದರೆ, ಹಲಸಿನ ತವರೂರಾದ ಭಾರತದಲ್ಲಿ ಹಲಸು ಭವಿಷ್ಯದ ಬೆಳೆಯಾಗಲಿದೆ.



**—ಅಡ್ಡೂರು ಕೃಷ್ಣ ರಾವ್**

# ಜನಮನ ಗೆದ್ದ ಸಿರಿಧಾನ್ಯ ಉತ್ಸವ

**"ಎಡವಿದ ಕಲ್ಲಿಗೆ ಶರಣಾಗಿ ಮುಂದೆ ಸಾಗು" ಎನ್ನುತ್ತಾರೆ ಜನಪದರು. ಮಾಡಿದ ತಪ್ಪನ್ನು ಅರಿತುಕೊಂಡು ಮುಂದಡಿ ಇಡಬೇಕೆಂಬುದು ಇದರ ಅರ್ಥ. ಐದಾರು ದಶಕಗಳಿಂದ ವಿಷ ರಾಸಾಯನಿಕಗಳನ್ನು ಬಳಸಿ ಬೆಳೆಸಿದ ಹಾಗೂ ಸಂರಕ್ಷಿಸಿದ ಆಹಾರ ಸೇವಿಸುತ್ತಿರುವ ನಾವು ಇಂದು ಅನೇಕ ರೋಗಗಳಿಂದ ಬಳಲುತ್ತಿದ್ದೇವೆ. ಇನ್ನಾದರೂ ಇಂತಹ ವಿಷವೃತ್ತದಿಂದ ಹೊರಬರಬೇಕೆಂಬ ಜಾಗೃತಿಯನ್ನು ಜನರಲ್ಲಿ ಮೂಡಿಸಬೇಕೆಂಬ ಕಾಳಜಿಯಿಂದ, ಮಂಗಳೂರಿನ "ಸಾವಯವ ಕೃಷಿಕ ಗ್ರಾಹಕ ಬಳಗ"ವು ೨೫ ಜೂನ್ ೨೦೧೭ರಂದು ಬಾಳಂಭಟ್ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮ: ಸಾವಯವ ತಿಂಡಿ ಮತ್ತು ಸಿರಿಧಾನ್ಯ ಉತ್ಸವ.**

ಜೂನ್ ೨೫ರ ಭಾನುವಾರ ಒಂದೆಡೆ ಧಾರಾಕಾರವಾಗಿ ಸುರಿಯುತ್ತಿದ್ದ ಮಳೆ, ಇನ್ನೊಂದೆಡೆ ಬೆಳ್ಳಂಬೆಳಗ್ಗೆ



ಸಿರಿಧಾನ್ಯ ಮೇಳ ಉದ್ಘಾಟನೆ

ಬಾಳಂಭಟ್ ಹಾಲ್ಗೆ ಲಗ್ಗೆ ಇಡುತ್ತಿದ್ದ ಜನರ ದಂಡು. ಹೆಂಗಸರು, ಮಕ್ಕಳು, ಯುವಜನರು, ನಡುವಯಸ್ಕರು, ವೃದ್ಧರು ಎಲ್ಲರೂ ಅಲ್ಲಿದ್ದರು. ಮಂಗಳ ಕಾರ್ಯಗಳು ನಡೆಯುವ ಆ ಹಾಲ್ನ ಮಧ್ಯದಲ್ಲಿ ಭುಜದೆತ್ತರದ ಕಂಚಿನ ದೀಪ. ಹಾಲ್ನ ನಾಲ್ಕೂ ಬದಿಗಳಲ್ಲಿ ಕ್ರಮಬದ್ಧವಾಗಿ ವ್ಯವಸ್ಥೆ ಮಾಡಲಾಗಿದ್ದ ೨೫ ಸ್ಟಾಲುಗಳು. ಕೆಲವು ಸ್ಟಾಲುಗಳಲ್ಲಿ ಹಣ್ಣುಹಂಪಲು, ತರಕಾರಿಗಳು, ದವಸಧಾನ್ಯಗಳು ತುಂಬಿದ್ದರೆ, ಹಲವು ಸ್ಟಾಲುಗಳಲ್ಲಿ ಸಾವಯವ ತಿಂಡಿತಿನಿಸುಗಳು ತುಂಬಿದ್ದವು. ಇದು ಸಾವಯವ ಕೃಷಿಕ ಗ್ರಾಹಕ ಬಳಗವು ಮಂಗಳೂರಿನಲ್ಲಿ ಪ್ರಪ್ರಥಮ ಬಾರಿಗೆ ಏರ್ಪಡಿಸಿದ್ದ ಸಿರಿಧಾನ್ಯ ಉತ್ಸವದ ನೋಟ.

ಅಂದು ದೀಪ ಬೆಳಗಿಸಿ ಸಿರಿಧಾನ್ಯ ಉತ್ಸವವನ್ನು ಉದ್ಘಾಟಿಸಿದವರು ಬೆಂಗಳೂರಿನ "ಗ್ರಾಮೀಣ ಕುಟುಂಬ" ಸಾವಯವ ಕೃಷಿಕರ ಸಂಘಟನೆಯ ಶ್ರೀಧರಮೂರ್ತಿ ಅವರು. "ಇವತ್ತು ಬೆಳ್ಳಂಬೆಳಗ್ಗೆಯೇ ಮಂಗಳೂರಿನ ನೂರಾರು ಜನರು ಸಿರಿಧಾನ್ಯ ಉತ್ಸವಕ್ಕೆ ಬರುತ್ತಲೇ ಇರುವುದು ಸಿರಿಧಾನ್ಯಗಳಿಗೆ ದೊಡ್ಡ ಭವಿಷ್ಯವಿದೆ ಅನ್ನೋದರ ಸೂಚನೆ" ಎಂದು ತಮ್ಮ ಉದ್ಘಾಟನಾ ಭಾಷಣವನ್ನು ಆರಂಭಿಸಿದ ಅವರು, "ಸಾವಯವ ಪದ್ಧತಿಯಲ್ಲಿ ಬೆಳೆಸಿದ ಸಿರಿಧಾನ್ಯಗಳ ಸೇವನೆಯಿಂದ ಮಕ್ಕಳು ಆರೋಗ್ಯವಂತರಾಗುತ್ತಾರೆ; ಇವನ್ನು ತಿನ್ನುವ ಗರ್ಭಿಣಿಯರಿಗೆ ಸಾಮಾನ್ಯ ಹೆರಿಗೆಯಾಗುತ್ತದೆ. ಹಾಗಾಗಿ ಸಿರಿಧಾನ್ಯಗಳು ಭವಿಷ್ಯದ ಆಹಾರ" ಎಂದು ತಿಳಿಸಿದರು.

# ಜನಮನ ಗೆದ್ದ ಸಿರಿಧಾನ್ಯ ಉತ್ಸವದ ನೋಟ














ಶ್ರೀಮತಿ ಸವಿತಾ ಭಟ್ ಅಡ್ವಾಯಿ ಇವರಿಂದ ಪಾಕ ವಿಧಾನ ಪ್ರಾತ್ಯಕ್ಷಿಕೆ

**ಪುಸ್ತಕ ಬಿಡುಗಡೆ ಕಾರ್ಯಕ್ರಮ :** ಡಾ. ಜಿ.ಕೆ. ವೀರೇಶ್ ಮತ್ತು ಅಡ್ಡೂರು ಕೃಷ್ಣ ರಾವ್ ಬರೆದಿರುವ **'ಕೃಷಿ ವಿಜ್ಞಾನ'** ಪುಸ್ತಕ ಬಿಡುಗಡೆ.
**ಸ್ಥಳ :** ಶ್ರೀಕೃಷ್ಣರಾಜ ಪರಿಷತ್ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ , ಬೆಂಗಳೂರು .
**ದಿನಾಂಕ:** ೧/೦೭/೨೦೧೭ , ಶನಿವಾರ
**ಸಮಯ :** ಬೆಳಿಗ್ಗೆ ೧೦:೩೦
**ಪುಸ್ತಕದ ಪ್ರಕಾಶಕರು:** ನವಕರ್ನಾಟಕ ಪ್ರಕಾಶನ, ಬೆಂಗಳೂರು



ಶ್ರೀಧರಮೂರ್ತಿ ಅವರಿಂದ ಉದ್ಘಾಟನಾ ಭಾಷಣ

ಆಹಾರದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿರುವ ಫಲವಾಗಿ ಸಾವಯವ ಆಹಾರ ಪದ್ಧತಿಗೆ ಜನರೀಗ ಶರಣಾಗಿದ್ದಾರೆ. ಪರಿಣಾಮವಾಗಿ ಫಿಜ್ಜಾ ಮತ್ತು ಬರ್ಗರ್ ಪ್ರಿಯರಾದ ಐಟಿ ಹಾಗೂ ಬಿಟಿ ಉದ್ಯೋಗಿಗಳು ಕೂಡ ಅದಕ್ಕೆ ಸಲಾಂ ಹೊಡೆದು ಅವನ್ನು ತೊರೆಯುತ್ತಿದ್ದಾರೆ. ಬೆಂಗಳೂರಿನ ಹೆಚ್ಚಿನ ಐಟಿ ಮತ್ತು ಬಿಟಿ ಕಂಪೆನಿಗಳ ಕ್ಯಾಂಟೀನುಗಳಲ್ಲಿ ಈಗ ಸಾವಯವ ತಿಂಡಿತಿನಿಸುಗಳು ಲಭ್ಯವಿವೆ ಎಂದು ಶ್ರೀಧರಮೂರ್ತಿಯವರು ಮಾಹಿತಿ ನೀಡಿದರು. ಸಾವಯವ ಕೃಷಿ ಉತ್ಪನ್ನಗಳ ಖರೀದಿಯಿಂದ ನಮ್ಮ ಆರೋಗ್ಯ ಸುಧಾರಿಸುತ್ತದೆ ಮತ್ತು ರೈತರಿಗೂ ಸಹಾಯವಾಗುತ್ತದೆ ಎಂದರು.

ಸಾವಯವ ಕೃಷಿ ಉತ್ಪನ್ನಗಳು ಹಾಗೂ ಬಗೆಬಗೆಯ ತಿಂಡಿತಿನಿಸುಗಳು: ಅಲ್ಲಿ ಉತ್ಸವದಲ್ಲಿ ಸಾವಯವ ಪದ್ಧತಿಯಲ್ಲಿ ಬೆಳೆಸಿದ ಕರಿಮೆಣಸು, ನೆಲಬಸಳೆ, ಕೆಸುವಿನ ಎಲೆ, ತಜಂಕು ಸೊಪ್ಪು, ಅನಾನಸ್, ಬಾಳೆಪೂಂಬೆ (ಹೂ), ಪಪ್ಪಾಯಿ, ಪೇರಳೆ, ಸೌತೆಕಾಯಿ, ಗೆಣಸು ಇತ್ಯಾದಿ ತರಕಾರಿಗಳು, ರಾಗಿ,



ಸಿರಿಧಾನ್ಯ ಬೆಳೆಗಾರರಿಗೆ ಸನ್ಮಾನ

ಬಿಳಿಜೋಳ, ಮೆಕ್ಕೆಜೋಳ, ಜವೆಗೋಧಿ, ಸಜ್ಜೆ, ಸಿರಿಧಾನ್ಯಗಳಾದ ನವಣೆ, ಸಾಮೆ, ಅರ್ಕ, ಕೊರಲೆ, ಊದಲು ಮತ್ತು ಸಾವಯವ ಕಂದುಸಕ್ಕರೆ ಸ್ಟಾಲುಗಳಲ್ಲಿ ಮಾರಾಟಕ್ಕೆ ಲಭ್ಯವಿದ್ದವು. ಸಾವಯವ ಬಳಗದ ಸದಸ್ಯ ಸದಸ್ಯೆಯರು ಮನೆಯಲ್ಲೇ ತಯಾರಿಸಿದ ಹಲಸಿನ ಹಪ್ಪಳ, ಚಕ್ಕುಲಿ, ಚಿಪ್ಸ್, ಗಾರಿಗೆ, ಗಟ್ಟಿ, ಪಾಯಸ, ಹಲ್ವ, ಬನ್ಸ್, ಸಿರಿಧಾನ್ಯಗಳ ಉಪ್ಪಿಟ್ಟು, ಕ್ಷೀರ, ಹಲ್ವ, ಮೊಸರನ್ನ, ಜೋಳದ ರೊಟ್ಟಿ, ಕೊರಲೆ ರೊಟ್ಟಿ, ಕೆಸುವಿನೆಲೆ ಪತ್ರೊಡೆ, ಕಡಲೆಬೇಳೆ ಚಟ್ಟಂಬಡೆ, ಮೆಣಸಿನ ಬಜ್ಜಿ ಇತ್ಯಾದಿ ತಿಂಡಿತಿನಿಸುಗಳ ಮಾರಾಟ ಜೋರಾಗಿತ್ತು. ಹಲವಾರು ತಿಂಡಿತಿನಿಸುಗಳನ್ನು ಸ್ಥಳದಲ್ಲಿಯೇ ತಯಾರಿಸಿ ಬಿಸಿಬಿಸಿಯಾಗಿ ಒದಗಿಸುತ್ತಿದ್ದದ್ದು ವಿಶೇಷ. ಸ್ಟಾಲುಗಳಿಗೆ ಭೇಟಿ ನೀಡುತ್ತಾ, ಸವಿಸವಿಯಾದ ತಿನಿಸುಗಳನ್ನು ಚಪ್ಪರಿಸುತ್ತಾ, ಮನೆಗೆ ಒಯ್ಯಲಿಕ್ಕಾಗಿಯೂ ಕಟ್ಟಿಸಿಕೊಳ್ಳುತ್ತಾ ಇದ್ದ ಜನರ ಖುಷಿ ಅವರ ಹಾವಭಾವಗಳಲ್ಲಿಯೆ ಸ್ಪಷ್ಟವಾಗಿ ಕಾಣಿಸುತ್ತಿತ್ತು.



"ವಿಜಯಕರ್ನಾಟಕ", ೨೬.೬.೨೦೧೭ ವರದಿ

## ಈ ಸಂಚಿಕೆಯ ಪ್ರಾಯೋಜಕರು


sāranga infotech

ಸಂಪದ
ಹೊಸ ಚಿಗುರು ಹಳೆ ಬೇರು

http://www.saaranga.com/ www.sampada.net



ಸಾವಯವ ಸಂಪದ: ಸಂಪಾದಕ ಅಡ್ಡೂರು ಕೃಷ್ಣ ರಾವ್ "ಸಂಪದ. ನೆಟ್" ಪರವಾಗಿ ಪ್ರಕಟಿಸಿದ ಆನ್ಲೈನ್ ಪತ್ರಿಕೆ

ತಾಂತ್ರಿಕ ಸಲಹೆ: ಹರಿಪ್ರಸಾದ್ ನಾಡಿಗ್

ಪತ್ರಿಕೆ ವಿನ್ಯಾಸ ಮತ್ತು ಪುಟಸಂಯೋಜನೆ: ಚೈತ್ರಿಕ.ಯು.ಭಟ್

ಫೋಟೋಗಳು: ಅಡ್ಡೂರು ಕೃಷ್ಣ ರಾವ್

ಪತ್ರಿಕೆಗೆ ತಾಂತ್ರಿಕ ನೆರವು: ಸಾರಂಗ ಇನ್ಫೋಟೆಕ್, ಬೆಂಗಳೂರು